Bruhat Bengaluru
Mahanagara Palike

# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ಕನ್ನಡ ದಿನಪತ್ರಿಕೆಗಳ ತುಣಕು

## 27-12-2020



# ಪರಿವಿಡಿ

1. ಪ್ರಜಾ ವಾಣಿ
2. ಕನ್ನಡ ಪ್ರಭ
3. ವಿಜಯ ಕರ್ನಾಟಕ
4. ವಿಜಯ ವಾಣಿ
5. ವಿಶ್ವ ವಾಣಿ
6. ಉದಯ ವಾಣಿ
7. ಸಂಯುಕ್ತ ಕರ್ನಾಟಕ
8. ಹೊಸ ದಿಗಂತ
9. ವಾರ್ತಾ ಭಾರತಿ
10. ಸಂಜೆ ವಾಣಿ
11. ಈ ಸಂಜೆ

# ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಸುದ್ದಿ ಮಾಧ್ಯಮ

ಕಸ ವಿಲೇವಾರಿ– 27 ವಾರ್ಡ್‌ಗಳಲ್ಲಿ ಕಸ ವಿಂಗಡಣೆ ಪ್ರಮಾಣ ಶೇ 39ರವರೆಗೆ ಹೆಚ್ಚಳ

# ಗುತ್ತಿಗೆ ನಂತರವೂ ಕಾಣದ ಸುಧಾರಣೆ

• ಪ್ರವೀಣ್ ಕುಮಾರ್ ಪಿ.ವಿ

**ಬೆಂಗಳೂರು:** ಬಿಬಿಎಂಪಿಯ ವ್ಯಾಪ್ತಿಯಲ್ಲಿ ಕಸ ವಿಲೇವಾರಿ ಗುತ್ತಿಗೆ ಜಾರಿಗೊಳಿಸಲಾದ ವಾರ್ಡ್‌ಗಳ ಪೈಕಿ 27 ವಾರ್ಡ್‌ಗಳಲ್ಲಿ ಹಸಿ ಕಸ ಮತ್ತು ಒಣ ಕಸ ವಿಂಗಡಣೆ ಪ್ರಮಾಣದಲ್ಲಿ ಶೇ 1ರಿಂದ ಶೇ 39ರಷ್ಟು ಹೆಚ್ಚಳ ಕಂಡು ಬಂದಿದೆ. ಆದರೆ 11 ವಾರ್ಡ್‌ಗಳಲ್ಲಿ ಗುತ್ತಿಗೆ ಜಾರಿಯಾದ ಬಳಿಕವೂ ಯಾವುದೇ ಸುಧಾರಣೆ ಕಾಣಿಸಿಲ್ಲ. ಈ ಪೈಕಿ ಎಂಟು ವಾರ್ಡ್‌ಗಳಲ್ಲಿ ಗುತ್ತಿಗೆ ಜಾರಿಯ ಮೊದಲಿಗಿಂತಲೂ ಕಳಪೆ ಸಾಧನೆ ಕಂಡುಬಂದಿದೆ.

ಹಸಿ ಕಸ, ಒಣ ಕಸ ಹಾಗೂ ನೈರ್ಮಲ್ಯ ಕಸಗಳನ್ನು ಪ್ರತ್ಯೇಕವಾಗಿ ಸಂಗ್ರಹಿಸಿ ವಿಲೇವಾರಿ ಮಾಡುವ ಹೊಸ ಟೆಂಡರ್‌ಗಳನ್ನು ಬಿಬಿಎಂಪಿ ನಗರದ 38 ವಾರ್ಡ್‌ಗಳಲ್ಲಿ 2020ರ ಸೆಪ್ಟೆಂಬರ್‌ನಲ್ಲಿ ಜಾರಿಗೊಳಿಸಿತ್ತು. ಈ ವಾರ್ಡ್‌ಗಳಲ್ಲಿ ಮೂರು ತಿಂಗಳುಗಳ ಒಳಗೆ ಕಸ ವಿಂಗಡಣೆ ಪ್ರಮಾಣ ಶೇ 100ರಷ್ಟು ತಲುಪಬೇಕು ಎಂದು ಪಾಲಿಕೆ ಗುರಿ ನಿಗದಿಪಡಿಸಿತ್ತು.

ಕಸ ವಿಲೇವಾರಿಗೆ ಗುತ್ತಿಗೆ ಜಾರಿಗೊಳಿಸಿದ ಬಳಿಕ ಅಲ್ಲಿನ ವ್ಯವಸ್ಥೆ ಎಷ್ಟರಮಟ್ಟಿಗೆ ಸುಧಾರಣೆಯಾಗಿದೆ ಎಂಬ ಬಗ್ಗೆ ಬಿಬಿಎಂಪಿಯೇ ಮಾಹಿತಿ ಕಲೆ ಹಾಕಿ ವಿಶ್ಲೇಷಣೆಗೆ ಒಳಪಡಿಸಿದೆ. ಗುತ್ತಿಗೆ ಜಾರಿಯಾಗುವ ಮುನ್ನ (ಜುಲೈ ತಿಂಗಳು) ಹಾಗೂ ನಂತರ ಪ್ರತಿ ತಿಂಗಳು ಪ್ರತಿ ವಾರ್ಡ್‌ನಲ್ಲಿ ಎಷ್ಟು ಪ್ರಗತಿ ಆಗಿದೆ ಎಂಬುದನ್ನು ಹಸಿ, ಒಣ ಕಸಗಳ ವಿಂಗಡಣೆ ಆಧಾರದಲ್ಲಿ ತುಲನೆ ಮಾಡಲಾಗಿದೆ.

ಹೆಚ್ಚು ಸುಧಾರಣೆ ಕಂಡಿರುವ ವಾರ್ಡ್‌ಗಳಲ್ಲಿ ಬೊಮ್ಮನಹಳ್ಳಿ ವಲಯದ ಬೆಂಗಳೂರು ದಕ್ಷಿಣ ವಿಭಾಗದ ಸಿಂಗಸಂದ್ರ ವಾರ್ಡ್ ಅಗ್ರಸ್ಥಾನದಲ್ಲಿದೆ. ಇಲ್ಲಿ ಜುಲೈ ತಿಂಗಳಿನಲ್ಲಿ ಕಸ ವಿಂಗಡಣೆ ಪ್ರಮಾಣ ಶೇ 33ರಷ್ಟಿತ್ತು. ಅದೀಗ ಶೇ 72ಕ್ಕೆ ಹೆಚ್ಚಳವಾಗಿದೆ. ಪಶ್ಚಿಮ ವಲಯದ ಚಾಮರಾಜಪೇಟೆ ವಿಭಾಗದ ರಾಯಪುರ ವಾರ್ಡ್ ಎರಡನೇ ಸ್ಥಾನದಲ್ಲಿದೆ. ಅಲ್ಲಿ ಜುಲೈಗೆ ಮುನ್ನ ಕಸ ವಿಂಗಡಣೆ ಸಮರ್ಪಕವಾಗಿ ಆಗುತ್ತಿರಲಿಲ್ಲ. ಆದರೆ ಈಗ ಶೇ 31ರಷ್ಟು ಕಸ ವಿಂಗಡಣೆ ಆಗುತ್ತಿದೆ. ಪಶ್ಚಿಮ ವಲಯದ ಗೋವಿಂದ ರಾಜನಗರ ವಿಭಾಗದ ನಾಯಂಡಹಳ್ಳಿ ವಾರ್ಡ್ ಕಸ ವಿಂಗಡಣೆಯಲ್ಲಿ ಶೇ 21ರಷ್ಟು ಪ್ರಗತಿ ಸಾಧಿಸುವ ಮೂಲಕ ಮೂರನೇ ಸ್ಥಾನದಲ್ಲಿದೆ. ಇಲ್ಲಿ ಗುತ್ತಿಗೆ ಜಾರಿಗೆ ಮುನ್ನ ಶೇ 22ರಷ್ಟು ಕಸ ವಿಂಗಡಣೆಯಾಗುತ್ತಿದ್ದರೆ, ಈಗ ಶೇಕಡಾ 43ರಷ್ಟು ವಿಂಗಡಣೆಯಾಗುತ್ತಿದೆ.

ಒಟ್ಟಾರೆ ಕಸ ವಿಂಗಡಣೆಯಲ್ಲಿ ಬೊಮ್ಮನಹಳ್ಳಿ ವಿಭಾಗದ ಮಂಗಮ್ಮನಪಾಳ್ಯ ವಾರ್ಡ್ ಮುಂಚೂಣಿಯಲ್ಲಿದೆ. ಗುತ್ತಿಗೆ ಜಾರಿಯಾಗಿರುವ ವಾರ್ಡ್‌ಗಳಲ್ಲೇ ಅತಿ ಹೆಚ್ಚಿನ ಪ್ರಮಾಣದಲ್ಲಿ (ಶೇ 74ರಷ್ಟು) ಕಸ ವಿಂಗಡಣೆ ಆಗುತ್ತಿರುವುದು ಈ ವಾರ್ಡ್‌ನಲ್ಲಿ. ಇಲ್ಲಿ ಗುತ್ತಿಗೆ ಜಾರಿಗೂ ಮುನ್ನವೇ ಶೇ 54ರಷ್ಟು ಕಸ ವಿಂಗಡಣೆ ಆಗುತ್ತಿತ್ತು.

‘ಕಸ ವಿಲೇವಾರಿ ಗುತ್ತಿಗೆ ಜಾರಿ ಆದ ಬಳಿಕ ಹೆಚ್ಚಿನ ವಾರ್ಡ್‌ಗಳಲ್ಲಿ ವಿಂಗಡಣೆ ಪ್ರಮಾಣ ಸಾಕಷ್ಟು ಹೆಚ್ಚಳ ಕಂಡಿದೆ. ಸ್ವಚ್ಛತೆ ಕಾಪಾಡುವುದಕ್ಕೆ ಸಂಬಂಧಿಸಿ ಪ್ರತಿ ವಾರ್ಡ್‌ಗೂ ಗುರಿ ನಿಗದಿ ಪಡಿಸಿದ್ದೇವೆ. ಅದನ್ನು ಈಡೇರಿಸಲು ಪೌರಕಾರ್ಮಿಕರು, ಮನೆ ಮನೆಯಿಂದ ಕಸ ಸಾಗಿಸುವ ವಾಹನಗಳ ಸಿಬ್ಬಂದಿ ಹಾಗೂ ಬಿಬಿಎಂಪಿ ಅಧಿಕಾರಿಗಳು ಶಕ್ತಿ ಮೀರಿ ಪ್ರಯತ್ನಿಸುತ್ತಿದ್ದಾರೆ’ ಎಂದು ಬಿಬಿಎಂಪಿ ಆಯುಕ್ತ ಎನ್.ಮಂಜುನಾಥ ಪ್ರಸಾದ್ ತಿಳಿಸಿದರು.

ಎಂಟು ವಾರ್ಡ್‌ಗಳಲ್ಲಿ ಕಳಪೆ ಸಾಧನೆ ಕುರಿತು ಪ್ರತಿಕ್ರಿಯಿಸಿದ ಅವರು, ‘ಈ ಹಿನ್ನಡೆಗೆ ಕಾರಣ ಏನು ಎಂಬ ಬಗ್ಗೆ ಪತ್ತೆ ಹಚ್ಚುವಂತೆ ಅಧಿಕಾರಿಗಳಿಗೆ ಸೂಚನೆ ನೀಡಿದ್ದೇನೆ. ಇಲ್ಲಿನ ವ್ಯವಸ್ಥೆಗಳಲ್ಲಿ ಏನಾದರೂ ಲೋಪವಿದ್ದರೆ, ತಕ್ಷಣವೇ ಸರಿಪಡಿಸಿಕೊಳ್ಳಲು ಕ್ರಮ ಕೈಗೊಳ್ಳುತ್ತೇವೆ’ ಎಂದರು.

ಪ್ರಜಾವಾಣಿ ವಿಶೇಷ

**ಕಸ ವಿಂಗಡಣೆ–ಹಿಂದಿಗಿಂತಲೂ ಕುಸಿತ ಕಂಡ ವಾರ್ಡ್‌ಗಳು**

|  | ವಿಭಾಗ | ಜುಲೈ ತಿಂಗಳಲ್ಲಿ (%) | ಅಕ್ಟೋಬರ್ ತಿಂಗಳಲ್ಲಿ (%) | ಕುಸಿತದ ಪ್ರಮಾಣ (%) |
|---|---|---|---|---|
| ದಾಸರಹಳ್ಳಿ | ಟಿ–ದಾಸರಹಳ್ಳಿ | 29 | 28 | -1 |
| ಬೊಮ್ಮನಹಳ್ಳಿ | ಬೊಮ್ಮನಹಳ್ಳಿ | 55 | 53 | -2 |
| ಯಲಹಂಕ | ಚೌಡೇಶ್ವರಿ | 29 | 27 | -2 |
| ಬೆಂ.ದಕ್ಷಿಣ | ವಸಂತಪುರ | 30 | 26 | -4 |
| ಗೋವಿಂದರಾಜನಗರ | ಮೂಡಲಪಾಳ್ಯ | 41 | 35 | -6 |
| ಗೋವಿಂದರಾಜನಗರ | ನಾಗರಬಾವಿ | 29 | 20 | -9 |
| ಚಿಕ್ಕಪೇಟೆ | ಸಿದ್ದಾಪುರ | 13 | 0 | -13 |

**ಶೇ 50ಕ್ಕೂ ಹೆಚ್ಚು ಕಸ ವಿಂಗಡಣೆಯಾಗುವ ವಾರ್ಡ್‌ಗಳು**

| ವಿಭಾಗ | ವಾರ್ಡ್ | ಪ್ರಮಾಣ (%) |
|---|---|---|
| ಬೊಮ್ಮನಹಳ್ಳಿ | ಮಂಗಮ್ಮನಪಾಳ್ಯ | 74 |
| ಬೆಂ.ದಕ್ಷಿಣ | ಸಿಂಗಸಂದ್ರ | 72 |
| ಬೊಮ್ಮನಹಳ್ಳಿ | ಬೊಮ್ಮನಹಳ್ಳಿ | 53 |
| ಯಲಹಂಕ | ಕೆಂಪೇಗೌಡ | 52 |
| ಚಾಮರಾಜಪೇಟೆ | ಛಲವಾದಿಪಾಳ್ಯ | 50 |

**ಕಸ ವಿಂಗಡಣೆ: ಈ ವಾರ್ಡ್‌ಗಳಲ್ಲಿ ಸಾಧನೆ ಶೂನ್ಯ**

| ವಿಭಾಗ | ವಾರ್ಡ್ |
|---|---|
| ಯಲಹಂಕ | ಅಟ್ಟೂರು |
| ಶಿವಾಜಿನಗರ | ಭಾರತೀನಗರ |
| ಶಿವಾಜಿನಗರ | ಶಿವಾಜಿನಗರ |
| ಪದ್ಮನಾಭನಗರ | ಹೊಸಕೆರೆಹಳ್ಳಿ |

ಪ್ರಜಾವಾಣಿ
ಅತ್ಯಂತ ವಿಶ್ವಾಸಾರ್ಹ ಸುದ್ದಿ ಮಾಧ್ಯಮ

# ಬ್ರಿಟನ್‌ನಿಂದ ಮರಳಿದ 14 ಮಂದಿಗೆ ಕೋವಿಡ್

ಬೆಂಗಳೂರು: ಬ್ರಿಟನ್‌ನಿಂದ ನಗರಕ್ಕೆ ಮರಳಿದವರ ಪೈಕಿ 14 ಮಂದಿಗೆ ಕೋವಿಡ್ ದೃಢಪಟ್ಟಿದೆ.



1,769 ಮಂದಿ ಬ್ರಿಟನ್‌ನಿಂದ ಬಂದಿದ್ದು, ಅವರಲ್ಲಿ 220 ಮಂದಿ ಪತ್ತೆಯಾಗಿಲ್ಲ. ಕೋವಿಡ್ ಪರೀಕ್ಷೆಗೆ 1,489 ಮಂದಿ ಲಭ್ಯವಿದ್ದು, 902 ಮಂದಿಯನ್ನು ಪರೀಕ್ಷೆಗೆ ಒಳಪಡಿಸಲಾಗಿದೆ. ಇನ್ನೂ 587 ಮಂದಿಗೆ ಪರೀಕ್ಷೆ ನಡೆಸಬೇಕಿದ್ದು, 590 ಮಂದಿಯ ಪರೀಕ್ಷಾ ವರದಿ ಬರಬೇಕಿದೆ. ಬೊಮ್ಮನಹಳ್ಳಿ ವಲಯದಲ್ಲಿ ಮೂವರಲ್ಲಿ, ಪೂರ್ವ ಮತ್ತು ದಕ್ಷಿಣ ವಲಯಗಳಲ್ಲಿ ತಲಾ ಒಬ್ಬರು, ಮಹಾದೇವಪುರ ವಲಯದಲ್ಲಿ ಐವರು ಹಾಗೂ ಪಶ್ಚಿಮ ವಲಯದಲ್ಲಿ ನಾಲ್ವರು ಕೋವಿಡ್ ಹೊಂದಿರುವುದು ದೃಢಪಟ್ಟಿದೆ ಎಂದು ಬಿಬಿಎಂಪಿ ಮುಖ್ಯ ಆರೋಗ್ಯಾಧಿಕಾರಿ ಡಾ.ವಿಜಯೇಂದ್ರ 'ಪ್ರಜಾವಾಣಿ'ಗೆ ತಿಳಿಸಿದರು.

ಪ್ರಜಾವಾಣಿ
ಅತ್ಯಂತ ವಿಶ್ವಾಸಾರ್ಹ ಸುದ್ದಿ ಮಾಧ್ಯಮ

**ಸಚಿವರು, ಐಪಿಎಸ್ ಅಧಿಕಾರಿಗಳಿಗೆ ಲಸಿಕೆ**

# 100ಕ್ಕೂ ಹೆಚ್ಚು ಗಣ್ಯರಿಗೆ ಕೊವ್ಯಾಕ್ಸಿನ್ ಪ್ರಯೋಗ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಕೋವಿಡ್‌ಗೆ ದೇಸೀಯವಾಗಿ ಅಭಿವೃದ್ಧಿಪಡಿಸಲಾಗುತ್ತಿರುವ ಕೊವ್ಯಾಕ್ಸಿನ್ ಲಸಿಕೆಯ ಮೂರನೇ ಹಂತದ ಪರೀಕ್ಷೆ ನಡೆಯುತ್ತಿದೆ. ಈ ಹಂತದಲ್ಲಿ 100ಕ್ಕೂ ಅಧಿಕ ಗಣ್ಯರಿಗೆ ಈ ಲಸಿಕೆ ಪ್ರಯೋಗ ಮಾಡಲಾಗಿದೆ ಎಂದು ಈ ಪರೀಕ್ಷೆ ನಡೆಸುತ್ತಿರುವ ಪ್ರಯೋಗಾಲಯ ಹೇಳಿಕೊಂಡಿದೆ.

‘14 ಮಂದಿ ಸಚಿವರು ಹಾಗೂ ಅನೇಕ ಐಪಿಎಸ್ ಅಧಿಕಾರಿಗಳಿಗೆ ಈ ಲಸಿಕೆ ನೀಡಲಾಗಿದೆ’ ಎಂದು ಈ ಲಸಿಕೆಯ ಪರೀಕ್ಷಾರ್ಥ ಪ್ರಯೋಗಗಳನ್ನು ನಡೆಸುತ್ತಿರುವ ಸಂಶೋಧನಾ ಸಂಸ್ಥೆಯಾದ ಕ್ಲಿನ್‌ಟ್ರ್ಯಾಕ್ ಇಂಟರ್‌ನ್ಯಾಷನಲ್ ಪ್ರೈವೇಟ್ ಲಿಮಿಟೆಡ್ ಸಂಸ್ಥೆಯ ಚೈತನ್ಯ ಅಡಿಕೆಸವಲು ತಿಳಿಸಿದರು.

ಸಚಿವರು ಅವರ ಮನೆಯವರು, ಕಾರ್ಮಿಕರು, ವಿದ್ಯಾರ್ಥಿಗಳು, ಮಾಹಿತಿ ತಂತ್ರಜ್ಞಾನ ಕ್ಷೇತ್ರದ ಉದ್ಯೋಗಿಗಳು




ಮತ್ತಿ ಇತರರಿಗೆ ಈ ಲಸಿಕೆ ನೀಡಿದ್ದನ್ನು ಕ್ಲಿನ್‌ಟ್ರ್ಯಾಕ್ ಸಂಸ್ಥೆಯ ಆಡಳಿತ ನಿರ್ದೇಶಕ ಡಾ.ರಾಜೇಶ್ ನಾಯ್ಡು ಖಚಿತಪಡಿಸಿದರು.

‘ದೇಶದಾದ್ಯಂತ ಕೋವ್ಯಾಕ್ಸಿನ್ ಲಸಿಕೆಯ ಪ್ರಯೋಗ ನಡೆಯುತ್ತಿದೆ. ಭಾರಿ ಸಂಖ್ಯೆಯಲ್ಲಿ ಜನರು ಈ ಪ್ರಕ್ರಿಯೆಯಲ್ಲಿ ಭಾಗವಹಿಸಬೇಕು’ ಎಂದು ಡಾ. ನಾಯ್ಡು ತಿಳಿಸಿದರು.

ಭಾರತೀಯ ವೈದ್ಯಕೀಯ ಸಂಶೋಧನಾ ಮಂಡಳಿಯ (ಐಸಿಎಂಆರ್) ನಿಗದಿಪಡಿಸಿರುವ ಗುರಿಯ ಪ್ರಕಾರ ಲಸಿಕೆಯ ಎರಡನೇ ಡೋಸ್ ಅನ್ನು ಇದೇ 30ರಿಂದ ದೇಶದಾದ್ಯಂತ 26 ಸ್ಥಳಗಳಲ್ಲಿ ನೀಡಲು ಸಿದ್ಧತೆ ನಡೆದಿದೆ. 26 ಸಾವಿರಕ್ಕೂ ಅಧಿಕ ಸ್ವಯಂಸೇವಕರು ಇದನ್ನು ಪಡೆಯಲಿದ್ದಾರೆ. ಮೂರನೇ ಹಂತದ ಪ್ರಯೋಗದ ಮೊದಲ ಡೋಸ್ ಅನ್ನು ಡಿ.1ರಂದು ನೀಡಲಾಗಿದೆ.

ಬೆಂಗಳೂರಿನಲ್ಲಿ ಲಸಿಕೆ ಪ್ರಯೋಗಕ್ಕೆ ನಗರದ ನಿವಾಸಿಗಳಿಂದ ಅಷ್ಟೇನೂ ಸ್ಪಂದನೆ ಸಿಕ್ಕಿಲ್ಲ. ‘1500ಕ್ಕೂ ಸ್ವಯಂಸೇವಕರು ಮೊದಲ ವಾರದಲ್ಲಿ ಈ ಲಸಿಕೆ ಪಡೆಯಲು ನೋಂದಣಿ ಮಾಡಿಸಿದ್ದು ನೋಡಿ, ಈ ನಗರದಲ್ಲಿ ಲಸಿಕೆ ಪಡೆಯಲು ಜನ ಉತ್ಸಾಹದಿಂದ ಮುಂದೆ ಬರುತ್ತಾರೆ ಎಂದು ಭಾವಿಸಿದ್ದೆವು. ಆದರೆ, ಲಸಿಕೆ ಪಡೆದವರ ಸಂಖ್ಯೆ ತೀರಾ ಕಡಿಮೆ ಇತ್ತು’ ಎಂದು ಡಾ. ನಾಯ್ಡು ತಿಳಿಸಿದರು.

ವೈದೇಹಿ ಇವೈದ್ಯಕೀಯ ವಿಜ್ಞಾನಗಳು ಮತ್ತು ಸಂಶೋಧನಾ ಕೇಂದ್ರದಲ್ಲಿ (ವಿಐಎಂಆರ್‌ಸಿ) ನಡೆದ ಈ ಲಸಿಕೆಯ ಪ್ರಯೋಗದಲ್ಲಿ ತೊಡಗಿಸಿಕೊಂಡ ಸಂಶೋಧಕರ ಪ್ರಕಾರ ಕೇವಲ 262 ಸ್ವಯಂಸೇವಕರು ಮಾತ್ರ ಲಸಿಕೆ ಪಡೆಯಲು ಇದುವರೆಗೆ ಮುಂದೆ ಬಂದಿದ್ದಾರೆ.

ವೈದೇಹಿ ಸಂಸ್ಥೆಯಲ್ಲಿ ನಡೆದಿದ್ದ ಲಸಿಕೆ ಪ್ರಯೋಗಕ್ಕೆ ಹೊರ ರಾಜ್ಯದವರೂ ಸೇರಿದಂತೆ 800 ಮಂದಿ ಹೆಸರು ನೋಂದಾಯಿಸಿದ್ದರು. ಯಾರೆಲ್ಲ ಸಚಿವರಿಗೆ ಹಾಗೂ ಐಪಿಎಸ್ ಅಧಿಕಾರಿಗಳಿಗೆ ಲಸಿಕೆ ನೀಡಲಾಗಿದೆ ಎಂಬ ಬಗ್ಗೆ ಮಾಹಿತಿ ನೀಡಲು ಸಂಸ್ಥೆ ನಿರಾಕರಿಸಿದೆ.

‘ಈ ಲಸಿಕೆ ಪಡೆದವರ ಹೆಸರನ್ನು ಗೌಪ್ಯವಾಗಿಡಲಾಗಿದೆ. ಯಾರೆಲ್ಲ ಲಸಿಕೆ ಪಡೆದಿದ್ದಾರೆ ಎಂಬ ಪಟ್ಟಿ ನಮ್ಮ ಸಂಸ್ಥೆಗೂ ಸಿಕ್ಕಿಲ್ಲ’ ವಿಐಎಂಆರ್‌ಸಿ ನಿರ್ದೇಶಕ ಡಾ.ಕೆ.ಎಂ.ಶ್ರೀನಿವಾಸ ಮೂರ್ತಿ ತಿಳಿಸಿದರು.

‘ಕೊವ್ಯಾಕ್ಸಿನ್‌ಗೆ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗಿದೆ. ಐಸಿಎಂಆರ್ ಇತ್ತೀಚೆಗೆ ಪ್ರಕಟಿಸಿರುವ ದತ್ತಾಂಶಗಳ ಪ್ರಕಾರ ಇದು ದೇಹದಲ್ಲಿ ಪ್ರತಿರೋಧ ಶಕ್ತಿ ಹೆಚ್ಚಿಸುವಲ್ಲಿ ತುಂಬಾ ಪರಿಣಾಮಕಾರಿಯಾಗಿದೆ. ಕೋವ್ಯಾಕ್ಸಿನ್ ಸಂಗ್ರಹಕ್ಕೆ ಇತರ ಲಸಿಕೆಗಳಂತೆ ಡೀಪ್‌ಫ್ರೀಜರ್‌ಗಳ ಅಗತ್ಯ ಇಲ್ಲ. ಈ ಲಸಿಕೆಯನ್ನು 3ಡಿಗ್ರಿಯಿಂದ 8 ಡಿಗ್ರಿ ಸೆಂಟಿಗ್ರೇಡ್ ಉಷ್ಣಾಂಶದಲ್ಲೂ ಸಂಗ್ರಹಿಸಬಹುದು’ ಎಂದರು.

ಪ್ರಜಾವಾಣಿ
ಅತ್ಯಂತ ವಿಶ್ವಾಸಾರ್ಹ ಸುದ್ದಿ ಮಾಧ್ಯಮ

## ನಮ್ಮ ಮೆಟ್ರೊ: ಶಿವಾಜಿನಗರ ಸುರಂಗ ಮಾರ್ಗ ಕೊರೆಯುವ ವೇಳೆ ಕುಸಿದ ಭೂಮಿ

# ಜಾಲತಾಣಗಳಲ್ಲಿ ಹರಿದಾಡಿದ ವಿಡಿಯೊ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** 'ನಮ್ಮ ಮೆಟ್ರೊ' ಎರಡನೇ ಹಂತದಲ್ಲಿ ನಡೆಯುವ ಸುರಂಗ ಮಾರ್ಗ ನಿರ್ಮಾಣ ಕಾಮಗಾರಿಗೆ ಸಂಬಂಧಿಸಿದ ವಿಡಿಯೊ ಒಂದು ಸಾಮಾಜಿಕ ಜಾಲತಾಣದಲ್ಲಿ ಹರಿದಾಡುತ್ತಿದೆ. ಶಿವಾಜಿನಗರ-ಬಂಬೂ ಬಜಾರ್ ಮಾರ್ಗದಲ್ಲಿ ಸುರಂಗ ಕೊರೆಯುವ ವೇಳೆ ಕಾಂಕ್ರೀಟ್ ರಸ್ತೆ ಕುಸಿದು, ಆಳವಾದ ಗುಂಡಿ ಬಿದ್ದ ವಿಡಿಯೊ ಇದಾಗಿದೆ.

ವಾರದ ಹಿಂದೆ ಇದೇ ಕಾಮಗಾರಿಯ ಪರಿಣಾಮ ಈ ಮಾರ್ಗದಲ್ಲಿನ ಮನೆಯೊಂದಕ್ಕೆ ಹಾನಿಯಾಗಿತ್ತು. ತಕ್ಷಣವೇ ಎಚ್ಚೆತ್ತುಕೊಂಡಿದ್ದ ಬೆಂಗಳೂರು ಮೆಟ್ರೊ ರೈಲು ನಿಗಮ (ಬಿಎಂಆರ್‌ಸಿಎಲ್) ನಿವಾಸಿಗಳ ಸ್ಥಳಾಂತರಕ್ಕೆ ಸೂಚನೆ ನೀಡಿತ್ತು. ಈಗ ಈ ವಿಡಿಯೊ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿದೆ.

'ವಿಡಿಯೊವನ್ನು ಯಾವ ದಿನದಂದು ಸೆರೆ ಹಿಡಿಯಲಾಗಿದೆ ಎಂಬುದು ಗೊತ್ತಿಲ್ಲ. ಆದರೆ, ನೀರಿನ ಪೈಪ್, ಕಾಂಕ್ರೀಟ್ ರಸ್ತೆ ಕುಸಿಯುತ್ತಿರುವ ದೃಶ್ಯ ಅದರಲ್ಲಿ ಸೆರೆಯಾಗಿದೆ. ಸುಮಾರು ಐದು ಅಡಿಯಷ್ಟು ವಿಸ್ತಾರದ ಗುಂಡಿ ಬಿದ್ದಿದೆ. ಮೆಟ್ರೊ ಕಾಮಗಾರಿ ನಡೆಯುತ್ತಿರುವ ಪ್ರದೇಶದ ಆಸುಪಾಸಿನಲ್ಲಿ ವಾಸಿಸುವ ನಮಗೆ ಭಯವಾಗುತ್ತಿದೆ' ಎಂದು ಶಿವಾಜಿನಗರ ನಿವಾಸಿ ಸೈಯದ್ ಅಹಮ್ಮದ್ ಆತಂಕ ವ್ಯಕ್ತಪಡಿಸಿದರು.

48 ಸೆಕೆಂಡ್‌ಗಳಿರುವ ಈ ವಿಡಿಯೊವನ್ನು ಶಿವಾಜಿನಗರ-ಬಂಬೂ ಬಜಾರ್ ರಸ್ತೆಯಲ್ಲಿ ಸೆರೆ ಹಿಡಿಯಲಾಗಿದೆ.

**ಮನೆಗೆ ಹಾನಿಯಾಗಿತ್ತು:** ಕಂಟೋ



ಕಾಂಕ್ರೀಟ್ ರಸ್ತೆ ಕುಸಿದಿರುವ ವಿಡಿಯೊದ ಸ್ಕ್ರೀನ್‌ಶಾಟ್

## 'ಎರಡೂವರೆ ತಿಂಗಳು ಹಳೆಯ ವಿಡಿಯೊ'

'ಈಗ ವಾಟ್ಸ್‌ಆ್ಯಪ್‌ನಲ್ಲಿ ಹರಿದಾಡುತ್ತಿರುವ ವಿಡಿಯೊವನ್ನು ಅ.16ರಂದು ಮಾಡಲಾಗಿದೆ. ಆಗ ಟಿಬಿಎಂಗಳು 50 ಮೀಟರ್ ಅಷ್ಟೇ ಮುಂದೆ ಸಾಗಿದ್ದವು. ಅಂದರೆ, 50 ಮೀಟರ್‌ನಷ್ಟು ಮಾತ್ರ ಸುರಂಗ ಕೊರೆಯಲಾಗಿತ್ತು. ಆ ಪ್ರದೇಶದಲ್ಲಿ ವಾಸಿಸುತ್ತಿದ್ದವರನ್ನು ಅವರ ಒಪ್ಪಿಗೆ ಮೇರೆಗೆ ತಾತ್ಕಾಲಿಕವಾಗಿ ಸುರಕ್ಷಿತ ಸ್ಥಳಕ್ಕೆ ಕಳುಹಿಸಲಾಗಿದೆ. ಈ ತಾತ್ಕಾಲಿಕ ಸ್ಥಳಾಂತರ ಅವಧಿಗೆ ನಿವಾಸಿಗಳಿಗೆ ಪರಿಹಾರವನ್ನೂ ನೀಡಲಾಗುತ್ತಿದೆ' ಎಂದು ಬಿಎಂಆರ್‌ಸಿಎಲ್ ವ್ಯವಸ್ಥಾಪಕ ನಿರ್ದೇಶಕ ಅಜಯ್ ಸೇಠ್ **'ಪ್ರಜಾವಾಣಿ'**ಗೆ ತಿಳಿಸಿದರು.

'ಸುರಂಗ ಕೊರೆಯುವ ಕಾಮಗಾರಿ ಕೈಗೆತ್ತಿಕೊಳ್ಳುವ ಮುನ್ನ ಈ ಮಾರ್ಗದಲ್ಲಿನ ಕಟ್ಟಡಗಳ ಸ್ಥಿತಿ-ಗತಿಯ ಸಮೀಕ್ಷೆ ನಡೆಸಲಾಗಿದೆ. ಯಾವ ಕಟ್ಟಡದ ಪರಿಸ್ಥಿತಿ ಹೇಗಿದೆ ಎಂಬುದು ತಿಳಿದಿದೆ. ಅಲ್ಲದೆ, ಈಗಾಗಲೇ ಸ್ಥಳದಲ್ಲಿ ಸುರಂಗ ಮಾರ್ಗ ಕೊರೆಯುವ ಕಾರ್ಯಾಚರಣೆಯ ನಿರ್ವಹಣೆಗೆ ಉಪಕರಣಗಳನ್ನು ಅಳವಡಿಸಲಾಗಿದೆ. ಯಾವುದೇ ಕಟ್ಟಡಕ್ಕೆ ಹಾನಿಯಾಗುವಂತಿದ್ದರೆ ಇಂತಹ ಉಪಕರಣಗಳು ಮೊದಲೇ ಮಾಹಿತಿ ರವಾನಿಸುತ್ತವೆ' ಎಂದರು.

'ಎಲ್ಲ ಮನೆಗಳನ್ನು ಸ್ಥಳಾಂತರಿಸಲಾಗುತ್ತದೆ ಎಂಬುದು ಸರಿಯಲ್ಲ. ಯಾವ ಕಟ್ಟಡಗಳು ಸದೃಢವಾಗಿಲ್ಲವೋ ಅಂತಹ ಕಟ್ಟಡಗಳ ನಿವಾಸಿಗಳ ಸ್ಥಳಾಂತರಕ್ಕೆ ಮಾತ್ರ ಕ್ರಮ ಕೈಗೊಳ್ಳಲಾಗುತ್ತದೆ' ಎಂದೂ ಅವರು ಸ್ಪಷ್ಟಪಡಿಸಿದರು.

### ಮುಖ್ಯಾಂಶಗಳು

- ಕಾಂಕ್ರೀಟ್ ರಸ್ತೆ ಕುಸಿಯುತ್ತಿರುವ ದೃಶ್ಯ ವಿಡಿಯೊದಲ್ಲಿ ಸೆರೆ
- ಐದು ಅಡಿಯಷ್ಟು ವಿಸ್ತಾರದ ಗುಂಡಿ ಬಿದ್ದಿದೆ ಎಂದು ಸ್ಥಳೀಯರ ಆರೋಪ
- 48 ಸೆಕೆಂಡ್‌ಗಳ ವಿಡಿಯೊ ಶಿವಾಜಿನಗರ-ಬಂಬೂ ಬಜಾರ್ ರಸ್ತೆಯಲ್ಲಿ ಸೆರೆ ಹಿಡಿಯಲಾಗಿದೆ

ಬಜಾರ್ ಸಮೀಪದ ರಸ್ತೆಯಲ್ಲಿ ಅಬ್ದುಲ್ ರಜಾಕ್ ಎಂಬುವರ ಮನೆಯಲ್ಲಿ ಬಿರುಕು ಕಾಣಿಸಿಕೊಂಡಿತ್ತು. ಈ ಘಟನೆ ನಂತರ, ತಮ್ಮ ಮನೆಗಳಿಗೂ ಹಾನಿಯಾಗಬಹುದು ಎಂದು ಈ ಮಾರ್ಗ ಸಾಗುವ ಪ್ರದೇಶದ ಆಸುಪಾಸಿನ ನಿವಾಸಿಗಳು ಆತಂಕ ವ್ಯಕ್ತಪಡಿಸಿದ್ದರು.

'ನಾವು ಮನೆ ಕಟ್ಟಿದ ಜಾಗದಲ್ಲಿ ಹಿಂದೆ ತೆರೆದ ಬಾವಿ ಇತ್ತು. ಅದನ್ನು ಮುಚ್ಚಿ, ಆ ಜಾಗದಲ್ಲಿ ಮನೆ ನಿರ್ಮಿಸಲಾಗಿತ್ತು. ಎರಡು ವರ್ಷದ ಹಿಂದೆ ಒಂದು ಮಹಡಿಯ ಕಾಂಕ್ರೀಟ್ ಮನೆ ಮಾಡಿಕೊಂಡಿದ್ದೆವು. ನೆರೆಯ ಮನೆಗಳಲ್ಲೂ ಇದೇ ರೀತಿ, ಮೆಟ್ರೊ ಕಾಮಗಾರಿಯಿಂದ ನೀರು ನುಗ್ಗುವುದರ ಜತೆಗೆ ಬಿರುಕುಗಳು ಕಾಣಿಸಿಕೊಂಡಿವೆ' ಎಂದೂ ಅಬ್ದುಲ್ ರಜಾಕ್ ಹೇಳಿದ್ದರು.

'ಸ್ಥಳಾಂತರಗೊಳ್ಳಲು ಹೇಳಿದ್ದ ಬಿಎಂಆರ್‌ಸಿಎಲ್, ಇದಕ್ಕೆ ಪರಿಹಾರವನ್ನು ನೀಡುವುದಾಗಿ

ಪ್ರಜಾವಾಣಿ
ಅತ್ಯಂತ ವಿಶ್ವಾಸಾರ್ಹ ಸುದ್ದಿ ಮಾಧ್ಯಮ

### ಜಿಪಿಎಸ್ ಅಳವಡಿಸಿದ ಕೆಎಸ್‌ಪಿಸಿಬಿ, ಕಮಾಂಡ್ ಕಂಟ್ರೋಲ್ ಕೇಂದ್ರದ ಮೂಲಕ ನಿರ್ವಹಣೆ

# ವಿಷಕಾರಿ ಕಸ: ವಾಹನಗಳ ಮೇಲೆ ನಿಗಾ

• ವರುಣ್ ಹೆಗಡೆ

ಬೆಂಗಳೂರು: ಕೈಗಾರಿಕೆ, ವೈದ್ಯಕೀಯ ಸೇರಿದಂತೆ ವಿವಿಧ ವಿಷಕಾರಿ ಕಸವನ್ನು ಎಲ್ಲೆಂದರಲ್ಲಿ ಸುರಿಯುತ್ತಿದ್ದ ವಾಹನಗಳಿಗೆ ಕಡಿವಾಣ ಹಾಕಲು ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ (ಕೆಎಸ್‌ಪಿಸಿಬಿ) ಮುಂದಾಗಿದ್ದು, ವಾಹನಗಳಿಗೆ ಜಿಪಿಎಸ್ ಅಳವಡಿಕೆ ಮಾಡುವ ಮೂಲಕ ನಿಗಾ ವ್ಯವಸ್ಥೆಯನ್ನು ರೂಪಿಸಿದೆ.

ರಾಜಕಾಲುವೆಗಳಿಗೆ ಹಾಗೂ ಕೆರೆಗಳಿಗೆ ಕೈಗಾರಿಕೆಗಳ ಕೊಳಚೆ ನೀರನ್ನು ಹರಿಯಬಿಡುತ್ತಿರುವ ಬಗ್ಗೆ ಮಂಡಳಿಗೆ ನಿರಂತರ ದೂರುಗಳು ಬರುತ್ತಿವೆ. ಕೆಲ ಕೈಗಾರಿಕೆಗಳಿಗೆ ಎಚ್ಚರಿಕೆಯ ನೋಟಿಸ್ ನೀಡಲಾಗಿದೆ. ತ್ಯಾಜ್ಯಗಳು ಕೆರೆಗಳನ್ನು ಸೇರುತ್ತಿರುವುದರಿಂದ ಕುಡಿಯುವ ನೀರು ಕಲುಷಿತವಾಗುತ್ತಿದೆ ಎಂಬ ದೂರುಗಳೂ ಮಂಡಳಿಗೆ ಬಂದಿವೆ. ಕೈಗಾರಿಕಾ ತ್ಯಾಜ್ಯ ಸೇರಿದಂತೆ ವಿವಿಧ ಕಸಗಳನ್ನು ಎಲ್ಲೆಂದರಲ್ಲಿ ಹಾಕುತ್ತಿರುವ ಪರಿಣಾಮ ಅದರಿಂದ ಸುತ್ತಮುತ್ತಲಿನ ಪ್ರದೇಶದಲ್ಲಿ ಸಾಂಕ್ರಾಮಿಕ ಕಾಯಿಲೆಗಳು ಕಾಣಿಸಿಕೊಳ್ಳುವ ಸಾಧ್ಯತೆಯಿದೆ ಎಂದು ತಜ್ಞರು ಎಚ್ಚರಿಸಿದ್ದರು.

ಪ್ರಜಾವಾಣಿ ವಿಶೇಷ




ಜಿಪಿಎಸ್ ತಂತ್ರಜ್ಞಾನದ ನೆರವಿನಿಂದ ತ್ಯಾಜ್ಯವನ್ನು ಒಳಗೊಂಡ ವಾಹನಗಳ ಮೇಲೆ ನಿಗಾ ಇಡಲು ಕೆಎಸ್‌ಪಿಸಿಬಿ ರೂಪಿಸಿರುವ ವ್ಯವಸ್ಥೆ.

'ಪ್ರಮುಖ ಕೈಗಾರಿಕಾ ಪ್ರದೇಶಗಳಿಂದ ಕೈಗಾರಿಕಾ ತ್ಯಾಜ್ಯ ನೀರು ಹರಿದುಬರುತ್ತಿದೆ' ಎಂದು ಕರ್ನಾಟಕ ಕೈಗಾರಿಕಾ ಪ್ರದೇಶ ಅಭಿವೃದ್ಧಿ ಮಂಡಳಿಯು (ಕೆಐಎಡಿಬಿ) ಈ ಹಿಂದೆ ಲೋಕಾಯುಕ್ತಕ್ಕೆ ವರದಿ ನೀಡಿತ್ತು. ಈ ಬಗ್ಗೆ ಪರಿಶೀಲಿಸಿ ಕ್ರಮ ತೆಗೆದುಕೊಳ್ಳುವಂತೆ ಕೆಎಸ್‌ಪಿಸಿಬಿಗೆ ಲೋಕಾಯುಕ್ತ ಆದೇಶಿಸಿತ್ತು. ಅದರ ಅನುಸಾರ ಮಂಡಳಿಯು ರಾಜಕಾಲುವೆಗಳಿಗೆ ತ್ಯಾಜ್ಯ ನೀರನ್ನು ಹರಿಯಬಿಡುವ 76 ಕೈಗಾರಿಕೆಗಳನ್ನು ಮುಚ್ಚುವಂತೆ ಕಳೆದ ಜನವರಿಯಲ್ಲಿ ನೋಟಿಸ್ ನೀಡಿತ್ತು. ಈಗ ತ್ಯಾಜ್ಯ ನೀರನ್ನು ಸಾಗಿಸುವ ಎಲ್ಲ 70 ವಾಹನಗಳಿಗೆ ಮಂಡಳಿಯು ಜಿಪಿಎಸ್ ಅಳವಡಿಕೆ ಮಾಡಿದೆ.

ನಿರಂತರ ನಿಗಾ: 'ತ್ಯಾಜ್ಯ ನೀರು ಸಂಸ್ಕರಣೆಯ 10 ಘಟಕಗಳು (ಸಿಇಟಿಪಿ) ರಾಜ್ಯದಲ್ಲಿವೆ. ಅವು ಸುಮಾರು ಒಂದು ಸಾವಿರ ಕೈಗಾರಿಕೆಗಳ ತ್ಯಾಜ್ಯವನ್ನು ಸಂಸ್ಕರಣೆ ಮಾಡುತ್ತಿವೆ. ಇಷ್ಟು ದಿನ ತ್ಯಾಜ್ಯ ನೀರನ್ನು ಕೆಲ ಕೈಗಾರಿಕೆಗಳು ಸಾರ್ವಜನಿಕ ಪ್ರದೇಶಗಳಲ್ಲಿ ಹರಿಬಿಡುತ್ತಿದ್ದವು. ಕಸವನ್ನೂ ಮನಬಂದಲ್ಲಿ ಹಾಕುತ್ತಿದ್ದವು. ಈ ಬಗ್ಗೆ ದೂರುಗಳು ಬರುತ್ತಿದ್ದವು. ಇದನ್ನು ತಡೆಯಬೇಕೆಂಬ ಉದ್ದೇಶದಿಂದ ನಾವೇ ಎಲ್ಲ 70 ವಾಹನಗಳಿಗೆ ಜಿಪಿಎಸ್ ತಂತ್ರಜ್ಞಾನವನ್ನು ಅಳವಡಿಕೆ ಮಾಡಿಸಿದ್ದೇವೆ. ಇದರಿಂದ ಆ ವಾಹನಗಳ ಮೇಲೆ ವಾರದ ಎಲ್ಲ ದಿನಗಳು ನಿಗಾ ಇಡಲು ಸಾಧ್ಯವಾಗುತ್ತದೆ' ಎಂದು ಮಂಡಳಿಯ ಸದಸ್ಯ ಕಾರ್ಯದರ್ಶಿ ಶ್ರೀನಿವಾಸಲು ತಿಳಿಸಿದರು.

'ವೈದ್ಯಕೀಯ ತ್ಯಾಜ್ಯವೂ ಸೇರಿದಂತೆ ಅಪಾಯಕಾರಿ ಕಸ ವಿಲೇವಾರಿ ಮಾಡುವ ವಾಹನಗಳಿಗೆ ಕೂಡ ಇದೇ ರೀತಿ ಜಿಪಿಎಸ್ ತಂತ್ರಜ್ಞಾನ ಅಳವಡಿಸಲಾಗಿದೆ. ವಾಹನಗಳು ಸಂಸ್ಕರಣಾ ಘಟಕಕ್ಕೆ ತ್ಯಾಜ್ಯವನ್ನು ವಿಲೇವಾರಿ ಮಾಡುವ ಬದಲು ಬೇರೆ ಪ್ರದೇಶದಲ್ಲಿ ಹಾಕಿದಲ್ಲಿ ಸುಲಭವಾಗಿ ಪತ್ತೆ ಮಾಡಿ, ಕ್ರಮಕೈಗೊಳ್ಳಲು ಸಾಧ್ಯ' ಎಂದರು.

## ಪ್ರತ್ಯೇಕ ಮೊಬೈಲ್ ಆ್ಯಪ್ ಅಭಿವೃದ್ಧಿ

ಕೈಗಾರಿಕಾ ತ್ಯಾಜ್ಯ ಹಾಗೂ ಅಪಾಯಕಾರಿ ತ್ಯಾಜ್ಯವನ್ನು ಒಳಗೊಂಡ ವಾಹನಗಳ ವಿವರ ಹಾಗೂ ಅವುಗಳು ಸಾಗುವ ಮಾರ್ಗದ ಮಾಹಿತಿಯನ್ನು ಒದಗಿಸುವ ಮೊಬೈಲ್ ಆ್ಯಪ್ ಅನ್ನು ಮಂಡಳಿಯು ಅಭಿವೃದ್ಧಿಪಡಿಸಿದೆ. ಈ ಆ್ಯಪ್‌ನ ನೆರವಿನಿಂದ ವಾಹನದ ಪ್ರತಿ ಚಲನವಲನವನ್ನು ವೀಕ್ಷಿಸಲು ಸಾಧ್ಯ. ಇದನ್ನು ಮಂಡಳಿಯ ಕಮಾಂಡ್ ಕಂಟ್ರೋಲ್ ಕೇಂದ್ರವು ನಿರ್ವಹಣೆ ಮಾಡಲಿದೆ. ಇದಕ್ಕಾಗಿಯೇ ಇಬ್ಬರು ಸಿಬ್ಬಂದಿಯನ್ನು ಮಂಡಳಿಯು ನಿಯೋಜಿಸಲು ಮುಂದಾಗಿದೆ.

'ಮಾಲಿನ್ಯವನ್ನು ನಿಯಂತ್ರಣ ಮಾಡಲು ಹಾಗೂ ಹೆಚ್ಚು ಕೈಗಾರಿಕಾ ತ್ಯಾಜ್ಯವನ್ನು ಹೊರಸೂಸುವ ಕೈಗಾರಿಕೆಗಳ ಮೇಲೆ ನಿಗಾ ಇಡಲು ಕಂಟ್ರೋಲ್ ಕೇಂದ್ರವನ್ನು ಸ್ಥಾಪಿಸಲಾಗಿದೆ. ಈ ಕೇಂದ್ರವು ಪ್ರತಿ 15 ನಿಮಿಷಕ್ಕೊಮ್ಮೆ ಕಾರ್ಖಾನೆಗಳ ವಾಯು, ಶಬ್ದ ಮತ್ತು ಜಲ ಮಾಲಿನ್ಯದ ಮಾಹಿತಿಯನ್ನು ಅಪ್‌ಡೇಟ್ ಮಾಡಲಿವೆ. ನಿಗದಿಗಿಂತ ಹೆಚ್ಚು ಮಾಲಿನ್ಯವಿದ್ದಲ್ಲಿ ಕಾರ್ಖಾನೆಗೆ ಸ್ವಯಂಚಾಲಿತ ಸಂದೇಶ ಹೋಗಲಿವೆ. ಅದೇ ಕೇಂದ್ರದಿಂದ ತ್ಯಾಜ್ಯ ವಿಲೇವಾರಿ ವಾಹನಗಳನ್ನೂ ನಿರ್ವಹಿಸಲಾಗುವುದು' ಎಂದು ಶ್ರೀನಿವಾಸಲು ವಿವರಿಸಿದರು.

ಕನ್ನಡಪ್ರಭ

# ಸ್ವಚ್ಛತೆ ಬಗ್ಗೆ ಸಾರ್ವಜನಿಕರಲ್ಲಿ ಅರಿವು ಮೂಡಿಸಿ

## ಕಸ ಸಂಗ್ರಹ, ವಿಲೇವಾರಿಯಲ್ಲಿ ಬದಲಾವಣೆ ಮಾಡಿ | ಅಧಿಕಾರಿಗಳಿಗೆ ಗುಪ್ತಾ ಸೂಚನೆ

• **ಕನ್ನಡಪ್ರಭ ವಾರ್ತೆ** ಬೆಂಗಳೂರು

ನಗರದಸ್ವಚ್ಛತೆಹಾಗೂಕಸದಸಮಸ್ಯೆ ನಿವಾರಿಸಲು ಕಸ ಸಂಗ್ರಹ, ವಿಲೇವಾರಿ ಮತ್ತು ಸಂಸ್ಕರಣೆ ಬಗ್ಗೆ ನಾಗರಿಕರಲ್ಲಿ ಅರಿವು ಮೂಡಿಸುವ ಕೆಲಸ ಮಾಡಬೇಕು ಎಂದು ಪಾಲಿಕೆ ಆಡಳಿತಾಧಿಕಾರಿ ಗೌರವ್ ಗುಪ್ತಾ ಹೇಳಿದ್ದಾರೆ.

'ಬೆಂಗಳೂರು ಮಿಷನ್-2022'ಗೆ ಸಂಬಂಧಿಸಿದಂತೆ 'ಸ್ವಚ್ಛ ಬೆಂಗಳೂರು' ಕುರಿತು ಬಿಬಿಎಂಪಿ ಆಡಳಿತಾಧಿಕಾರಿ ಗೌರವ್ ಗುಪ್ತಾ ಶನಿವಾರ ನಗರದ ವಿವಿಧ ಸ್ವಯಂ ಸೇವಾ ಸಂಸ್ಥೆಗಳ ಪ್ರತಿನಿಧಿಗಳೊಂದಿಗೆ ವಿಡಿಯೋ ಸಂವಾದ ನಡೆಸಿದರು. ಈ ವೇಳೆ ಮಾತನಾಡಿದ ಅವರು, ನಗರದ ಸ್ವಚ್ಛತೆ ಮತ್ತು ಕಸ ವಿಲೇವಾರಿ ಸಂಬಂಧಿಸಿದಂತೆ ಸಾಕಷ್ಟು ಬದಲಾವಣೆ ಮಾಡಬೇಕಿದೆ. ಸ್ಥಳೀಯ ನಾಗರಿಕ ಸಂಸ್ಥೆಗಳು, ನಿವಾಸಿ ಕಲ್ಯಾಣ ಸಂಘಗಳು (ಆರ್‌ಡಬ್ಲ್ಯುಎ) ಸಹಭಾಗಿತ್ವದಿಂದ ನಗರದ ಸ್ವಚ್ಛತೆ ಮತ್ತು ಕಸದ ಸಮಸ್ಯೆ ನಿವಾರಣೆ ಮಾಡಲು ಸಾಧ್ಯ ಎಂದರು.



ಸ್ವಯಂ ಸೇವಾ ಸಂಸ್ಥೆಗಳ ಪ್ರತಿನಿಧಿಗಳೊಂದಿಗೆ ಗೌರವ್ ಗುಪ್ತಾ ವಿಡಿಯೋ ಸಂವಾದ ನಡೆಸಿದರು.

**ಶುಚಿ ಮಿತ್ರರ ನೇಮಕ:** ಪ್ರತಿ ವಾರ್ಡ್‌ನಲ್ಲಿ 750 ರಿಂದ 1 ಸಾವಿರ ಮನೆಗಳಿಗೆ ಒಂದು ಬ್ಲಾಕ್ ರಚನೆ ಮಾಡಲಾಗಿದ್ದು, ಒಟ್ಟು 4,200 ಬ್ಲಾಕ್‌ಗಳನ್ನು ರಚಿಸಲಾಗಿದೆ. ಈ ಪೈಕಿ ಬ್ಲಾಕ್ ಮಟ್ಟದಲ್ಲಿ ಶುಚಿ ಮಿತ್ರರು, ಲಿಂಕ್ ವರ್ಕರ್ಸ್, ವಾರ್ಡ್ ಮಟ್ಟದಲ್ಲಿ ಮಾರ್ಷಲ್, ಕಿರಿಯ ಆರೋಗ್ಯ ಪರಿವೀಕ್ಷಕ, ಒಬ್ಬ ಸ್ವಯಂ ಸೇವಕರ ನೇಮಿಸುವುದು. ಘನತ್ಯಾಜ್ಯದ ಬಗ್ಗೆ ಸೂಕ್ತ ತರಬೇತಿ ನೀಡಲು ವಿಧಾನಸಭಾ ಕ್ಷೇತ್ರಕ್ಕೊಬ್ಬ ಮಾಸ್ಟರ್ ಟ್ರೈನರ್ ಗುರುತಿಸಿ ಸಾರ್ವಜನಿಕರಿಗೆ ಜಾಗೃತಿ ಮೂಡಿಸುವುದು. ಪ್ರಮುಖವಾಗಿ ಸ್ಥಳೀಯ ನಾಗರಿಕ ಸಂಸ್ಥೆಗಳು, ಸಾರ್ವಜನಿಕರನ್ನು ಭಾಗಿಯಾಗಿಸಿಕೊಂಡು ಕಸದ ಸಮಸ್ಯೆ ನಿವಾರಣೆಗೆ ಅಗತ್ಯ ಕ್ರಮವಹಿಸಬೇಕು ಎಂದು ಅಧಿಕಾರಿಗಳಿಗೆ ಸೂಚಿಸಿದರು.

ಘನತ್ಯಾಜ್ಯ ವಿಲೇವಾರಿಯ ಬಗ್ಗೆ ಅಧಿಕಾರಿಗಳೊಂದಿಗೆ ಪ್ರಗತಿ ಪರಿಶೀಲನಾ ಸಭೆ ನಡೆಸಿ ವರದಿ ಪಡೆಯಲು ಘನತ್ಯಾಜ್ಯ ವಿಭಾಗದ ವಿಶೇಷ ಆಯುಕ್ತ ರಂದೀಪ್ ಅವರಿಗೆ ಇದೇ ವೇಳೆ ಆಡಳಿತಾಧಿಕಾರಿ ಗೌರವ್ ಗುಪ್ತಾ ಸೂಚಿಸಿದರು.

ಸಭೆಯಲ್ಲಿ ಜಂಟಿ ಆಯುಕ್ತರು(ಘನತ್ಯಾಜ್ಯ) ಸರ್ಫರಾಜ್ ಖಾನ್, ಮುಖ್ಯ ಎಂಜಿನಿಯರ್ ವಿಶ್ವನಾಥ್, ಅಧೀಕ್ಷಕ ಎಂಜಿನಿಯರ್ ಬಸವರಾಜ್ ಕಬಾಡೆ, ವಲಯ ಜಂಟಿ ಆಯುಕ್ತರು ಹಾಗೂ ಅಧೀಕ್ಷಕ ಎಂಜಿನಿಯರ್‌ಗಳು ಉಪಸ್ಥಿತರಿದ್ದರು.

ಕನ್ನಡಪ್ರಭ Sun, 27 December 2020
https://kpepaper.asianetnews.com/c/57305680

ಕನ್ನಡಪ್ರಭ

# ನಾಪತ್ತೆ ಆದವರ ಸಂಖ್ಯೆ 220ಕ್ಕೆ ಏರಿಕೆ

## ಬ್ರಿಟನ್‌ನಿಂದ ನಗರಕ್ಕೆ ಆಗಮಿಸಿದವರಿಗಾಗಿ ಮುಂದುವರೆದ ಹುಡುಕಾಟ

## ನಾಪತ್ತೆಯಾದವರ ಮೊಬೈಲ್ ಆಫ್ | ಪೊಲೀಸರ ನೆರವು ಕೇಳಿದ ಪಾಲಿಕೆ

• **ಕನ್ನಡಪ್ರಭ ವಾರ್ತೆ** ಬೆಂಗಳೂರು

ಬ್ರಿಟನ್‌ನಿಂದ ಬೆಂಗಳೂರಿಗೆ ಬಂದು ನಾಪತ್ತೆಯಾದವರ ಸಂಖ್ಯೆ 220ಕ್ಕೆ ಏರಿಕೆಯಾಗಿದೆ. ಕಳೆದ ಶುಕ್ರವಾರ 151 ಇದ್ದ ನಾಪತ್ತೆ ಪ್ರಕರಣಗಳ ಸಂಖ್ಯೆ ಶನಿವಾರ 220ಕ್ಕೆ ಏರಿಕೆಯಾಗಿದೆ. ಬಿಬಿಎಂಪಿ ಅಧಿಕಾರಿಗಳು ನಾಪತ್ತೆಯಾದವರನ್ನು ಹುಡುಕಾಟದಲ್ಲಿ ತೊಡಗಿದ್ದಾರೆ. ನಾಪತ್ತೆಯಾದವರು ಮೊಬೈಲ್ ಆಫ್ ಮಾಡಿಕೊಂಡಿದ್ದಾರೆ ಹಾಗೂ ನೀಡಿದ ವಿಳಾಸದಲ್ಲಿ ವಾಸವಿಲ್ಲ. ಹೀಗಾಗಿ ಪತ್ತೆ ಮಾಡುವುದು ದೊಡ್ಡ ತಲೆನೋವಾಗಿದೆ. ನಾಪತ್ತೆಯಾದ ಪ್ರಯಾಣಿಕರ ವಿಳಾಸ ಹಾಗೂ ಮೊಬೈಲ್ ಸಂಖ್ಯೆಯನ್ನು ಪೊಲೀಸ್ ಇಲಾಖೆಗೆ ನೀಡಿ ಪತ್ತೆ ಮಾಡಿಕೊಡುವಂತೆ ಬಿಬಿಎಂಪಿ ಅಧಿಕಾರಿಗಳು ಮನವಿ ಮಾಡಿದ್ದಾರೆ.

ಒಂದು ವೇಳೆ ಉದ್ದೇಶಪೂರ್ವಕವಾಗಿ ಯಾವುದೇ ಪ್ರಯಾಣಿಕರು ತಪ್ಪಿಸಿಕೊಂಡಿರುವುದು ಕಂಡುಬಂದರೆ ವಿಪತ್ತು ನಿರ್ವಹಣಾ ಕಾಯ್ದೆಯಡಿ ಅವರ ವಿರುದ್ಧ ದೂರು ದಾಖಲಿಸಲಾಗುವುದು ಎಂದು ಬಿಬಿಎಂಪಿ ಎಚ್ಚರಿಸಿದೆ.

**ಸೋಂಕಿತರ ಸಂಖ್ಯೆ 14ಕ್ಕೆ ಏರಿಕೆ:** ರೂಪಾಂತರಿ ಕೊರೋನಾ ವೈರಸ್ ಪತ್ತೆಯಾಗಿರುವ ಬ್ರಿಟನ್‌ನಿಂದ ಬೆಂಗಳೂರಿಗೆ ಹಿಂದಿರುಗಿರುವವರ ಪೈಕಿ ಹೊಸದಾಗಿ ಶನಿವಾರ ಮೂವರಲ್ಲಿ ಕೊರೋನಾ ಸೋಂಕು ದೃಢಪಟ್ಟಿದ್ದು, ಸೋಂಕಿತರ ಸಂಖ್ಯೆ 14 ಕ್ಕೆ ಏರಿಕೆಯಾಗಿದೆ. ಈ ಮಧ್ಯೆ ಬ್ರಿಟನ್ನಿಂದ ವಾಪಸಾದ ಪ್ರಯಾಣಿಕರಲ್ಲಿ ಈವರೆಗೂ 220 ಜನರು ನಾಪತ್ತೆಯಾಗಿದ್ದಾರೆ.

ಡಿ.1ರಿಂದ 21ವರೆಗೆ ಬ್ರಿಟನ್‌ನಿಂದ ಒಟ್ಟು 1,768 ಮಂದಿ ಬೆಂಗಳೂರಿಗೆ ವಾಪಸ್ಸಾಗಿದ್ದಾರೆ. ಈ ಪೈಕಿ 1,489 ಮಂದಿಯನ್ನು ಪತ್ತೆ ಹಚ್ಚಿರುವ ಬಿಬಿಎಂಪಿ, 902 ಮಂದಿಯನ್ನು ಕೋವಿಡ್ ಪರೀಕ್ಷೆಗೆ ಒಳಪಡಿಸಿದೆ. 590 ಮಂದಿಯ ಪರೀಕ್ಷಾ ವರದಿ ಲಭ್ಯವಾಗಿದ್ದು, 14 ಮಂದಿಗೆ ಸೋಂಕು ಪತ್ತೆಯಾಗಿದೆ. 576 ಕೋವಿಡ್ ಪರೀಕ್ಷಾ ವರದಿ ನೆಗಟಿವ್ ಬಂದಿದೆ. ಇನ್ನೂ 314 ಮಂದಿಯ ಫಲಿತಾಂಶ ಬಾಕಿ ಇದೆ, ಉಳಿದ 587 ಮಂದಿಯನ್ನು ಪರೀಕ್ಷೆ ಬಾಕಿ ಇದೆ ಎಂದು ಬಿಬಿಎಂಪಿ ಅಧಿಕಾರಿಗಳು ಮಾಹಿತಿ ನೀಡಿದ್ದಾರೆ.

ಇದುವರೆಗೆ ಪತ್ತೆಯಾಗಿರುವ 14 ಕೋವಿಡ್ ಸೋಂಕು ಪ್ರಕರಣಗಳಲ್ಲಿ ಮಹದೇವಪುರ ವಲಯದಲ್ಲಿ 5, ಪಶ್ಚಿಮ 4, ಬೊಮ್ಮನಹಳ್ಳಿ 3, ದಕ್ಷಿಣ ಹಾಗೂ ಪೂರ್ವ ವಲಯದಲ್ಲಿ ತಲಾ 1 ಪ್ರಕರಣ ಪತ್ತೆಯಾಗಿದೆ.

ಬೆಂಗಳೂರಿನ ವಿಳಾಸ ನೀಡಿದ 20 ಮಂದಿ ಬೆಂಗಳೂರಿನಿಂದ ಹೊರ ಜಿಲ್ಲೆ ಹಾಗೂ ರಾಜ್ಯಗಳಿಗೆ ತೆರಳಿದ್ದಾರೆ. ಈ ಬಗ್ಗೆ ಸಂಬಂಧಿಸಿದ ಅಧಿಕಾರಿಗಳಿಗೆ ಮಾಹಿತಿ ನೀಡಲಾಗಿದೆ. 31 ಮಂದಿಯ ಹೆಸರು ಪುನರಾವರ್ತನೆಯಾಗಿದೆ. ಆರು ಮಂದಿ ಬ್ರಿಟನ್‌ನಿಂದ ಬೆಂಗಳೂರಿಗೆ ಆಗಮಿಸಿಲ್ಲ ಎಂದು ಬಿಬಿಎಂಪಿ ಅಧಿಕಾರಿಗಳು ಮಾಹಿತಿ ನೀಡಿದ್ದಾರೆ.

# ಏರ್ಪೋರ್ಟ್‌ನಲ್ಲಿ ಕಾಟಾಚಾರದ ಪರೀಕ್ಷೆ

## ವಿದೇಶದಿಂದ ಬಂದವರಿಗೆ ಕ್ವಾರಂಟೈನ್ ಸೀಲ್ ಹಾಕದೇ ನಿರ್ಲಕ್ಷ್ಯ

**ಬೆಂಗಳೂರು:** ಕೊರೋನಾ ರೂಪಾಂತರ ವೈರಸ್ ಭೀತಿ ಎದುರಾಗಿರುವ ಈ ಸಂದರ್ಭದಲ್ಲಿ ವಿದೇಶಗಳಿಂದ ನಗರಕ್ಕೆ ಬರುವ ಪ್ರಯಾಣಿಕರನ್ನು ಕೆಂಪೇಗೌಡ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಕಾಟಾಚಾರ ಪರೀಕ್ಷೆಗೆ ಒಳಪಡಿಸಲಾಗುತ್ತಿದೆ.

ವಿದೇಶಗಳಿಂದ ಬರುವವರನ್ನು ಕಡ್ಡಾಯವಾಗಿ ಕೊರೋನಾ ಸೋಂಕು ಪರೀಕ್ಷೆ ಒಳಪಡಿಸಲು ವಿಮಾನ ನಿಲ್ದಾಣದಲ್ಲಿ ಕಿಯೋಸ್ಕ್ ಆರಂಭಿಸಲಾಗಿದೆ. ವಿದೇಶದಿಂದ ಬರುವ ಪ್ರತಿ ಪ್ರಯಾಣಿಕರನ್ನು ಸ್ಕ್ರೀನಿಂಗ್ ಮಾಡಿ ಬಳಿಕ ಪರೀಕ್ಷೆ ನಡೆಸಿ, ಹೋಂ ಕ್ವಾರಂಟೈನ್ ಸೀಲ್ ಹಾಕಿ ಬಳಿಕ ಮನೆಗಳಿಗೆ ತೆರಳಲು ಅವಕಾಶ ಕಲ್ಪಿಸುವುದಾಗಿ ಆರೋಗ್ಯ ಇಲಾಖೆ ಅಧಿಕಾರಿಗಳು ಹೇಳಿದ್ದರು. ಆದರೆ ವಿದೇಶದಿಂದ ಬರುವ ಪ್ರಯಾಣಿಕರನ್ನು ಕೊರೋನಾ ಪರೀಕ್ಷೆಗೆ ಒಳಪಡಿಸಲಾಗಿದೆ. ಕ್ವಾರಂಟೈನ್ ಸೀಲ್ ಹಾಕಿಲ್ಲ.

ಕ್ವಾರಂಟೈನ್ ಸೀಲ್ ಹಾಕದಿರುವ ಬಗ್ಗೆ ಅಧಿಕಾರಿಗಳನ್ನು ಕೇಳಿದರೆ, ಆರೋಗ್ಯ ಸೇತು ಮೊಬೈಲ್ ಆ್ಯಪ್‌ನಲ್ಲೇ ಈ ಪ್ರಯಾಣಿಕರ ಬಗ್ಗೆ ನಿಗಾವಹಿಸುವುದಾಗಿ ಹೇಳುತ್ತಿದ್ದಾರೆ. ಆದರೆ ಪ್ರಯಾಣಿಕರು ಮನೆಯಲ್ಲೇ ಮೊಬೈಲ್ ಇರಿಸಿ ತಮಗೆ ಬೇಕಾದ ಕಡೆ ಸುತ್ತಾಡುವ ಸಾಧ್ಯತೆ ಇರುತ್ತದೆ. ಆರೋಗ್ಯ ಇಲಾಖೆ ಅಧಿಕಾರಿಗಳ ಈ ನಿರ್ಲಕ್ಷ್ಯತನದಿಂದ ಸೋಂಕು ವ್ಯಾಪಕವಾಗಿ ಹರಡುವ ಸಾಧ್ಯತೆ ಹೆಚ್ಚಿದೆ.

**ಮಾಹಿತಿ ನೀಡದ ಸರ್ಕಾರ:** ಶನಿವಾರ ವಿವಿಧ ದೇಶಗಳಿಂದ 2 ವಿಮಾನಗಳು ನಗರದ ಕೆಂಪೇಗೌಡ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಬಂದಿದ್ದು, 1 ಸಾವಿರಕ್ಕೂ ಅಧಿಕ ಮಂದಿ ಬಂದಿರಬಹುದು ಎಂದು ಅಂದಾಜಿಸಲಾಗಿದೆ. ಇಷ್ಟು ದಿನ ವಿದೇಶದಿಂದ ಬಂದವರ ಸಂಖ್ಯೆಯನ್ನು ಕೋವಿಡ್ ವರದಿಯಲ್ಲಿ ಪ್ರಕಟಿಸುತ್ತಿದ್ದ, ಆರೋಗ್ಯ ಇಲಾಖೆ ಶನಿವಾರ ವಿದೇಶದಿಂದ ಬಂದವರ ಮಾಹಿತಿ ಬಹಿರಂಗಪಡಿಸಿಲ್ಲ. ಇನ್ನು ವಿದೇಶಗಳಿಂದ 8 ವಿಮಾನಗಳು ನಗರಕ್ಕೆ ಬಂದಿವೆ ಎಂದು ಮಾಹಿತಿ ನೀಡಿರುವ ಏರ್‌ಪೋರ್ಟ್‌ನ ಅಧಿಕಾರಿಗಳು, ಈ ವಿಮಾನಗಳು ಯಾವ ದೇಶದಿಂದ ಬಂದಿವೆ ಎಂಬುದರ ಬಗ್ಗೆ ಮಾಹಿತಿ ಲಭ್ಯವಿಲ್ಲ ಎಂದರು.

# ಶೀಘ್ರದಲ್ಲೇ ಮಾರ್ಗಸೂಚಿ ಪ್ರಕಟ: ಸಚಿವ

**ಬೆಂಗಳೂರು:** ನಗರದಲ್ಲಿ ಹೊಸ ವರ್ಷಾಚರಣೆಗೆ ಹೆಚ್ಚು ಜನ ಸೇರದಿರಲು ಕೆಲವು ನಿರ್ಬಂಧ ಹೇರಲು ಉದ್ದೇಶಿಸಿದ್ದು, ಪೊಲೀಸರು ಶೀಘ್ರದಲ್ಲಿಯೇ ಮಾರ್ಗಸೂಚಿ ಪ್ರಕಟಿಸಲಿದ್ದಾರೆ ಎಂದು ಗೃಹ ಸಚಿವ ಬಸವರಾಜ ಬೊಮ್ಮಾಯಿ ತಿಳಿಸಿದ್ದಾರೆ.



ಶನಿವಾರ ಸುದ್ದಿಗಾರರ ಜತೆ ಮಾತನಾಡಿದ ಅವರು, ಕೊರೋನಾ ನಿಯಂತ್ರಣಕ್ಕೆ ಬರುತ್ತಿರುವ ಸಂದರ್ಭದಲ್ಲಿ ಬ್ರಿಟನ್ ರೂಪಾಂತರ ಕೊರೋನಾ ಆತಂಕ ಹುಟ್ಟಿಸಿದೆ. ಹಾಗಾಗಿ ಹೊಸ ವರ್ಷಾಚರಣೆ ವೇಳೆ ಹೆಚ್ಚು ಜನರ ಸೇರುವುದನ್ನು ತಡೆಯುವ ಸಂಬಂಧ ಕಂದಾಯ ಸಚಿವರ ಜತೆ ಚರ್ಚೆ ನಡೆಸಲಾಗಿದೆ ಎಂದರು. ವಿದೇಶಗಳಿಂದ ಬರುವವರ ಮೇಲೆ ನಿಗಾ ಇಡಲಾಗಿದೆ. ನಾಪತ್ತೆ ಆದವರನ್ನು ಪತ್ತೆ ಮಾಡಲು ಪೊಲೀಸರಿಗೆ ಸೂಚಿಸಲಾಗಿದೆ ಎಂದು ಹೇಳಿದರು.

ಕನ್ನಡಪ್ರಭ

# ನ್ಯೂ ಇಯರ್ ಪಾರ್ಟಿಗಳು ಹೊರವಲಯಕ್ಕೆ ಶಿಫ್ಟ್

## ಕೊರೋನಾ ಎಫೆಕ್ಟ್ | ನಗರದಲ್ಲಿ ಹೊಸವರ್ಷದ ವೇಳೆ ತಡರಾತ್ರಿ ಪಾರ್ಟಿಗಳಿಗೆ ಪೊಲೀಸರು ಬ್ರೇಕ್ ಹಾಕುವ ಶಂಕೆ

## ಫಾರ್ಮ್‌ಹೌಸ್‌ಗಳಲ್ಲಿ ಪಾರ್ಟಿಗೆ ಸಿದ್ಧತೆ | ಬಿಡದಿ, ನೆಲಮಂಗಲ, ಕನಕಪುರ, ಮಾಗಡಿಯತ್ತ ಬೆಂಗಳೂರಿಗರ ಹೆಜ್ಜೆ

• **ಎನ್.ಎಲ್. ಶಿವಮಾದು**

**ಕನ್ನಡಪ್ರಭ ವಾರ್ತೆ** ಬೆಂಗಳೂರು

ಹೊಸವರ್ಷಾಚರಣೆಯನ್ನುಸಂಭ್ರಮಿಸಲುನಗರದ ಕ್ಲಬ್, ಪಬ್‌ಗಳಲ್ಲಿ ಆಯೋಜನೆಯಾಗುತ್ತಿದ್ದ ಪಾರ್ಟಿಗಳು ಈ ಬಾರಿ ಕೊರೋನಾ ಹಿನ್ನೆಲೆಯಲ್ಲಿ ಹೊರವಲಯದತೋಟದಮನೆ,ಫಾರ್ಮ್‌ಹೌಸ್, ಜಮೀನುಗಳಿಗೆ ಶಿಫ್ಟ್ ಆಗುವ ಸಾಧ್ಯತೆಗಳಿವೆ.

ಕೊರೋನಾ ಹಿನ್ನೆಲೆಯಲ್ಲಿ ಹೊಸ ವರ್ಷಾಚರಣೆ ಸಂಭ್ರಮಕ್ಕೆ ರಾಜ್ಯ ಸರ್ಕಾರ ಬ್ರೇಕ್ ಹಾಕಬಹುದು ಎಂಬ ಮುನ್ನೆಚ್ಚರಿಕೆ ವಹಿಸಿರುವ ಆಯೋಜಕರು ಈ ಬಾರಿ ಹೊಸ ವರ್ಷದ ಕಾರ್ಯಕ್ರಮಗಳು, ಪಾರ್ಟಿಗಳನ್ನು ನಗರದಿಂದ 20ರಿಂದ 30 ಕಿ.ಮೀ. ಹೊರ ವಲಯದಲ್ಲಿ ಆಯೋಜನೆಗೆ ಸಿದ್ಧತೆ ನಡೆಸಿದ್ದಾರೆ.

ನಗರದೊಳಗೆಪಾರ್ಟಿಆಯೋಜಿಸಿದರೆನಿಯಮ ಉಲ್ಲಂಘನೆ ಮಾಡಲಾಗಿದೆ ಎಂದು ಪೊಲೀಸರು ಪಾರ್ಟಿಗಳನ್ನು ರದ್ದುಗೊಳಿಸಬಹುದು ಎಂಬ ಶಂಕೆಯಿಂದನಗರದಹೊರವಲಯಗಳಾದಬಿಡದಿ, ರಾಮನಗರ, ಮಾಗಡಿ, ನೆಲಮಂಗಲ, ದೊಡ್ಡಬಳ್ಳಾಪುರ, ಕನಕಪುರ, ಹೊಸಕೋಟೆ ಮತ್ತು ಆನೇಕಲ್ ಸುತ್ತಲಿನ ಪ್ರದೇಶಗಳಲ್ಲಿರುವ ತೋಟದ ಮನೆಗಳು, ಫಾರ್ಮ್ ಹೌಸ್‌ಗಳು, ಸ್ನೇಹಿತರ ಜಮೀನುಗಳಲ್ಲಿ ಪಾರ್ಟಿಗಳು ಆಯೋಜನೆಗೊಳ್ಳುತ್ತಿವೆ.



ಹೊರ ವಲಯದಲ್ಲಿ ಪಾರ್ಟಿಗಳ ಆಯೋಜನೆಯಿಂದ ಮೊದಲನೆಯದಾಗಿ ಪೊಲೀಸರ ಕಾಟ ಇರುವುದಿಲ್ಲ. ಸಾಮಾನ್ಯವಾಗಿ ಹೊಸ ವರ್ಷದ ಪಾರ್ಟಿಗಳು ರಾತ್ರಿ 12 ಗಂಟೆಯ ಬಳಿಕವೇ ರಂಗೇರುತ್ತವೆ. ಪೊಲೀಸರು ಮಧ್ಯ ರಾತ್ರಿ 1 ಗಂಟೆಗೆ ಬಾಗಿಲು ಹಾಕಿಸುತ್ತಾರೆ. ಹೊರ ವಲಯಗಳಲ್ಲಿ ಪೊಲೀಸರತೊಂದರೆಇರುವುದಿಲ್ಲ.ಪಾರ್ಟಿಮುಗಿದ ಬಳಿಕ ತಮ್ಮ ಮನೆಗಳಿಗೆ ತೆರಳುವ ಸಂದರ್ಭ ಎದುರಾಗುವುದಿಲ್ಲ. ಬೆಳಗ್ಗೆ ವರೆಗೆ ಅಲ್ಲಿಯೇ ಇದ್ದು, ನಿದ್ದೆ ಮಾಡಿ ಮಾರನೆಯ ದಿನ ಹಿಂತಿರುಗಬಹುದು. ಇದರಿಂದ ತಡರಾತ್ರಿ ಪಾರ್ಟಿ ಮುಗಿಸಿ ವಾಪಸ್ಸಾಗುವಾಗ ಅಪಘಾತಗಳಾಗುವುದನ್ನು ಸಹ ತಡೆಯಬಹುದು. ಇದೆಲ್ಲಕ್ಕಿಂತ ಮುಖ್ಯವಾಗಿ ಕೊರೋನಾ ನಿಯಮಗಳನ್ನು ಉಲ್ಲಂಘಿಸಿದರೂ ಯಾರೊಬ್ಬರು ಕೇಳುವುದಿಲ್ಲ ಎಂಬ ಕಾರಣಕ್ಕೆ ಹೊರ ವಲಯದಲ್ಲಿ ಪಾರ್ಟಿ ಆಯೋಜನೆಗೊಳ್ಳುತ್ತಿವೆ ಎನ್ನಲಾಗಿದೆ.

**ಪರಿಚಯಸ್ಥರೇ ಕೂಡಿ ಪಾರ್ಟಿ:** ಪಾರ್ಟಿಗಳನ್ನು ದೊಡ್ಡ ಮಟ್ಟದಲ್ಲಿ ಆಯೋಜಿಸುವ ಬದಲಾಗಿ ಸ್ನೇಹಿತರು, ಪರಿಚಯಸ್ಥರೇ 20ರಿಂದ 30 ಜನ ಸೇರಿ ಸಣ್ಣಮಟ್ಟದಲ್ಲಿಪಾರ್ಟಿಆಯೋಜನೆಮಾಡುತ್ತಿದ್ದಾರೆ. ಪರಿಯಸ್ಥಜನರೇಪಾರ್ಟಿಗಳನ್ನುಮಾಡುವುದರಿಂದ ಭದ್ರತೆ ಮತ್ತು ಸುರಕ್ಷತೆ ದೃಷ್ಟಿಯಿಂದಲೂ ಉತ್ತಮ ಎನಿಸುತ್ತಿದೆ. ಎಂಟ್ರಿ ಪಾಸ್‌ಗಳ ಬದಲಾಗಿ ಮೊದಲೇ ಇಂತಿಷ್ಟು ಹಣವನ್ನು ಮುಂಗಡವಾಗಿ ಪಡೆದು ಪಾರ್ಟಿಗಳನ್ನು ಆಯೋಜನೆ ಮಾಡಲಾಗುತ್ತಿದೆ. ಕ್ಲಬ್, ಪಬ್‌ಗಳಲ್ಲಿ ಹೋದರೆ ಬೇರೆಯವರಿಂದ ಕೊರೋನಾ ಹರಡಬಹುದು ಎಂಬ ಆತಂಕವಿದೆ. ಹೀಗಾಗಿ, ಪರಿಚಯಸ್ಥರೇ ಇದ್ದರೆ ಯಾವುದೇ ಭಯ ಇರುವುದಿಲ್ಲ ಎನ್ನುತ್ತಾರೆ ಜಯನಗರದ ಸಂದೀಪ್.

### ನಗರದ ಹೊರ ವಲಯವೇ ಉತ್ತಮ

ಕೊರೋನಾ ನಿಯಮ ಪಾಲನೆ, ವರ್ಷಾಚರಣೆ ಪಾರ್ಟಿಗಳು ನಿಗದಿತ ಸಮಯಕ್ಕಿಂತ ತಡವಾದರೆ ಪೊಲೀಸರೊಂದಿಗೆ ವಾಗ್ವಾದ, ಪಾರ್ಟಿ ಮುಗಿಸಿ ಮನೆಗೆ ಹಿಂತಿರುಗುವ ವೇಳೆ ಅಪಘಾತವಾಗುವ ಸಾಧ್ಯತೆಗಳಿವೆ. ಎಲ್ಲವನ್ನು ನೋಡಿದಾಗ ಹೊರ ವಲಯವೇ ಉತ್ತಮ ಎನಿಸಿದೆ. ತೋಟದ ಮನೆಗಳಲ್ಲಿ, ಬಯಲು ಪ್ರದೇಶಗಳಲ್ಲಿಯೇ ಡಿಜೆ, ಲೈಟಿಂಗ್ಸ್ ಅಲಂಕಾರ ಮಾಡಿಸಿ ಪಾರ್ಟಿಗಳನ್ನು ಆಯೋಜನೆ ಮಾಡಲಾಗುತ್ತಿದೆ ಎನ್ನುತ್ತಾರೆ ಪಾರ್ಟಿ ಆಯೋಜಕ ಕೀರ್ತಿ ಚಂದ್ರ.

### ಈ ವರ್ಷ ಕೇವಲ 25% ವಹಿವಾಟು

ಈ ಬಾರಿ ಕೊರೋನಾದಿಂದ ಪಬ್, ಕ್ಲಬ್ ಹಾಗೂ ರೆಸ್ಟೋರೆಂಟ್‌ಗಳಿಗೆ ಜನರು ಬರುವುದೇ ಅನುಮಾನವಾಗಿದೆ. ಆದ್ದರಿಂದ ಇಲ್ಲಿಯವರೆಗೂ ಯಾವುದೇ ಸಿದ್ಧತೆಗಳನ್ನು ಮಾಡಿಕೊಂಡಿಲ್ಲ. ಕಳೆದ ವರ್ಷಕ್ಕೆ ಹೋಲಿಸಿಕೊಂಡರೆ ಕೇವಲ ಶೇ.25 ರಷ್ಟು ವಹಿವಾಟು ನಡೆಯಬಹುದು ಎಂದು ಅಂದಾಜಿಸಲಾಗಿದೆ ಎನ್ನುತ್ತಾರೆ ಬಾರ್ ಮತ್ತು ರೆಸ್ಟೋರೆಂಟ್ ಮಾಲೀಕರ ಸಂಘದ ಅಧ್ಯಕ್ಷ ಮಧುಕರ್ ಶೆಟ್ಟಿ.

# 3.86 ಲಕ್ಷ ದಾಟಿದ ಸೋಂಕಿತರ ಸಂಖ್ಯೆ

• **ಕನ್ನಡಪ್ರಭ ವಾರ್ತೆ** ಬೆಂಗಳೂರು

ರಾಜಧಾನಿ ಬೆಂಗಳೂರಿನಲ್ಲಿ ಶನಿವಾರ 471 ಹೊಸ ಕೊರೋನಾ ಸೋಂಕು ಪ್ರಕರಣ ಪತ್ತೆಯಾಗಿದ್ದು, 491 ಮಂದಿ ಗುಣಮುಖರಾಗಿದ್ದಾರೆ. ನಾಲ್ವರು ಮೃತಪಟ್ಟ ವರದಿಯಾಗಿದೆ.



ಈ ಮೂಲಕ ಒಟ್ಟು ಸೋಂಕಿತರ ಸಂಖ್ಯೆ 3,86,057, ಗುಣಮುಖರ ಸಂಖ್ಯೆ 3,72,970 ತಲುಪಿದೆ. ಇನ್ನು ಸಕ್ರಿಯ ಪ್ರಕರಣಗಳ ಸಂಖ್ಯೆ 8,795ಕ್ಕೆ ಇಳಿಕೆಯಾಗಿದ್ದು, ಈ ಪೈಕಿ 97 ಮಂದಿ ಆರೋಗ್ಯ ಸ್ಥಿತಿ ಗಂಭೀರಗೊಂಡ ಹಿನ್ನೆಲೆಯಲ್ಲಿ ತೀವ್ರ ನಿಗಾ ಘಟಕದಲ್ಲಿ ಚಿಕಿತ್ಸೆ ನೀಡಲಾಗುತ್ತಿದೆ ಎಂದು ಆರೋಗ್ಯ ಇಲಾಖೆ ತಿಳಿಸಿದೆ.

ಇನ್ನು ಶನಿವಾರ ನಾಲ್ವರು ಸೋಂಕಿತರು ಮೃತಪಟ್ಟ ವರದಿಯಾಗಿದ್ದು, ಒಟ್ಟು ಮೃತರ ಸಂಖ್ಯೆ 4,291ಕ್ಕೆ ಏರಿಕೆಯಾಗಿದೆ.

ಕನ್ನಡಪ್ರಭ

# ಗೋಡೌನ್‌ಗೆ ಬೆಂಕಿ: ಇನ್ನೂ ಸಿಗದ ಪರಿಹಾರ

## ಮೈಸೂರು ರಸ್ತೆ ಕೆಮಿಕಲ್ ಗೋದಾಮಿಗೆ ಬೆಂಕಿ ಬಿದ್ದು ಒಂದೂವರೆ ತಿಂಗಳಾದರೂ ಸಂತ್ರಸ್ತರಿಗೆ ಸಿಕ್ಕಿಲ್ಲ ಪರಿಹಾರ

## ನಷ್ಟ ಅಂದಾಜಿಸಲು ಸ್ಥಳಕ್ಕೆ ಬಾರದ ಬಿಬಿಎಂಪಿ ಅಧಿಕಾರಿಗಳು | ಪರಿಹಾರ ಸಿಗದೇ ಸಂಕಷ್ಟಕ್ಕೆ ಸಿಲುಕಿದ ಸಂತ್ರಸ್ತರು

• **ಶಂಕರ್ ಎನ್.ಪರಂಗಿ**

**ಕನ್ನಡಪ್ರಭ ವಾರ್ತೆ** ಬೆಂಗಳೂರು

ಕಳೆದ ಒಂದೂವರೆ ತಿಂಗಳ ಹಿಂದೆ ನಗರದ ಮೈಸೂರು ರಸ್ತೆಯ ಹೊಸಗುಡ್ಡದಹಳ್ಳಿಯಲ್ಲಿನ ರೇಖಾ ಕೆಮಿಕಲ್ ಕಾರ್ಖಾನೆಯ ಗೋದಾಮಿನಲ್ಲಿ ಸಂಭವಿಸಿದ ಬೆಂಕಿ ಅವಘಡದಲ್ಲಿ ಸುಟ್ಟು ಹಾನಿಗೀಡಾದ ಮನೆ, ವಸ್ತುಗಳು ಹಾಗೂ ವಾಹನಗಳ ಮಾಲೀಕರಿಗೆ ಈವರೆಗೆ ಪರಿಹಾರ ಸಿಗದೇ ಸಂಕಷ್ಟದಲ್ಲಿದ್ದಾರೆ.

ಬೆಂಕಿ ಅವಘಡದಿಂದ ಹಾನಿಗೊಳಗಾದ ಸಂತ್ರಸ್ತರಿಗೆ ಕಾರ್ಖಾನೆಯ ಮಾಲೀಕರಿಂದಲೇ ಪರಿಹಾರ ಕೊಡಿಸುವುದಾಗಿ ಸರ್ಕಾರ ಹಾಗೂ ಪಾಲಿಕೆ ನೀಡಿದ ಭರವಸೆ ಇನ್ನೂ ಈಡೇರಿಲ್ಲ. ಘಟನೆ ನಂತರ ಮಹಜರು ಮಾಡಿದ ನಂತರ ಯಾವುದೇ ಅಧಿಕಾರಿಗಳು ಸಂತ್ರಸ್ತರ ಬಳಿ ಸುಳಿದಿಲ್ಲ. ಹೀಗಾಗಿ ಸಂತ್ರಸ್ತರು ಪರಿಹಾರಕ್ಕಾಗಿ ಕಾಯುತ್ತಿದ್ದಾರೆ.

ನ.10ರಂದು ಮೈಸೂರು ರಸ್ತೆಯ ಹೊಸಗುಡ್ಡದ ಹಳ್ಳಿ ಒಂದನೇ ಮುಖ್ಯರಸ್ತೆಯಲ್ಲಿರುವ ರೇಖಾ ಕೆಮಿಕಲ್ ಕಾರ್ಖಾನೆಯ ಗೋದಾಮಿಗೆ ಬೆಂಕಿ ಬಿದ್ದು ಸುಟ್ಟು ಭಸ್ಮವಾಗಿತ್ತು. ಈ ವೇಳೆ ಗೋದಾಮಿನ ಪಕ್ಕದಲ್ಲಿದ್ದ ಮನೆಗಳು, ವಾಹನಗಳು, ಮನೆಯ ವಸ್ತುಗಳು ಸುಟ್ಟು ಲಕ್ಷಾಂತರ ಮೌಲ್ಯದ ಆಸ್ತಿ ನಷ್ಟವಾಗಿತ್ತು.

ಪರಿಹಾರ ಪ್ರಕ್ರಿಯೆಯನ್ನು ಬಿಬಿಎಂಪಿ ಹಾಗೂ ಪೊಲೀಸರಿಗೆ ವಹಿಸಲಾಗಿತ್ತು. ಈ ಮಧ್ಯೆ ಸಂತ್ರಸ್ತರು ಮತ್ತು ಗೋದಾಮು ಮಾಲೀಕರ ನಡುವೆ ಸಂಧಾನ ಮಾಡಿಸಿದ ಪೊಲೀಸರು ಬಿಬಿಎಂಪಿಯತ್ತ ಬೆಟ್ಟು ಮಾಡುತ್ತಿದ್ದಾರೆ. ಆದರೆ ಬಿಬಿಎಂಪಿ ಅಧಿಕಾರಿಗಳು ನಷ್ಟ ಅಂದಾಜಿಸಲು ಸ್ಥಳಕ್ಕೆ ಬಂದಿಲ್ಲ. ಹೀಗಾಗಿ ತಿಂಗಳಿನಿಂದ ನಿತ್ಯ ಠಾಣೆ ಹಾಗೂ ಬಿಬಿಎಂಪಿಗೆ ಅಲೆಯುತ್ತಿದ್ದೇವೆ. ಅಧಿಕಾರಿಗಳು ಮಾತ್ರ ಜವಾಬ್ದಾರಿಯಿಂದ ನುಣುಚಿಕೊಳ್ಳುತ್ತಿದ್ದಾರೆ ಎಂದು ಸಂತ್ರಸ್ತರಾದ ರಾಮು ಮತ್ತು ರವಿಶಂಕರ್ ದೂರುತ್ತಿದ್ದಾರೆ.



**ಬಿದ್ದಲ್ಲೆ ಬಿದ್ದಿರುವ ಕರಕಲು ವಸ್ತುಗಳು:** ಗೋದಾಮಿಗೆ ಬೆಂಕಿ ಬಿದ್ದಾಗ ಅಂದಾಜು 180ಕ್ಕೂ ಹೆಚ್ಚು ವಾಹನಗಳು ಬೂದಿಯಾಗಿವೆ. ನಷ್ಟಕ್ಕೀಡಾದ ಒಟ್ಟು ಏಳು ಮನೆಗಳಲ್ಲಿ ಎರಡು ಮನೆಯ ಗೋಡೆಗಳು ಬಿರುಕು ಬಿಟ್ಟಿವೆ. ಉಳಿದಂತೆ ಬಟ್ಟೆ, ಸೋಫಾ, ಕುರ್ಚಿಗಳು, ಟಿವಿ, ಫ್ರಿಜ್, ಪಾತ್ರೆಗಳು, ಮನೆ ಮೇಲಿನ ನೀರಿನ ಡ್ರಂ, ಸೋಲಾರ್, ಪೈಪ್‌ಗಳು ಸೇರಿ ಲಕ್ಷಾಂತರ ಮೌಲ್ಯದ ಪಿಠೋಪಕರಣಗಳು ಸುಟ್ಟು ಕರಕಲಾಗಿವೆ. ನಷ್ಟದ ಅಂದಾಜು ವೆಚ್ಚ ಲೆಕ್ಕಮಾಡಿ ಪರಿಹಾರ ನೀಡಬೇಕೆಂಬ ಕಾರಣದಿಂದ ಸಂತ್ರಸ್ತರು ಹಾನಿಗೀಡಾದ ವಸ್ತುಗಳನ್ನು ಅಲ್ಲಿಯೇ ಇಟ್ಟುಕೊಂಡಿದ್ದಾರೆ.

**20 ಲಕ್ಷ ರು. ನಷ್ಟ:** ಬ್ಯಾಂಕ್‌ನಲ್ಲಿ 18 ಲಕ್ಷ ರು. ಸಾಲ ಮಾಡಿ ತಯಾರಿಸಿದ್ದ ಫರ್ನಿಚರ್, 300 ಕುರ್ಚಿಗಳು ಇಟ್ಟಿದ್ದ ಕೊಠಡಿಗೆ ಬೆಂಕಿ ತಾಗಿ ಕುರ್ಚಿಗಳು ಮತ್ತಿತರ ವಸ್ತುಗಳು ಬೂದಿಯಾಗಿವೆ. ಮೂರು ಅಂತಸ್ತಿನ ಕಟ್ಟಡದಲ್ಲಿ ಮೇಲಿದ್ದ ನಾಲ್ಕು ಮನೆಗಳ ಪೈಕಿ ಎರಡು ಮನೆಗಳು ಸುಟ್ಟಿವೆ. ಗೋಡೆಗಳು ಬಿರುಕು ಬಿಟ್ಟಿದ್ದು, 20 ಲಕ್ಷ ರು. ನಷ್ಟ ಆಗಿದೆ. ಬಾಡಿಗೆ ಹಾಗೂ ಭೋಗ್ಯಕ್ಕೆ ನೀಡಿದ್ದ ಮನೆಯವರು ಸ್ಥಳಾಂತರಗೊಂಡಿದ್ದಾರೆ. ಅವರೆಲ್ಲ ಟಿವಿ, ಕಂಪ್ಯೂಟರ್, ಶಾಲಾ ದಾಖಲೆಗಳು ಇತರ ವಸ್ತುಗಳು ಆಹುತಿಯಾಗಿದ್ದರಿಂದ ನಷ್ಟದ ಹಣಕ್ಕೆ ಒತ್ತಾಯಿಸುತ್ತಿದ್ದಾರೆ. ಸದ್ಯ ಬ್ಯಾಂಕಿಗೆ ಬಡ್ಡಿ ಕಟ್ಟಲಾಗದೆ, ಪರಿಹಾರ ಸಿಗದೇ ಪರದಾಡುತ್ತಿದ್ದೇನೆ ಎಂದು ಫರ್ನಿಚರ್ ಅಂಗಡಿ ಮಾಲೀಕ ಎಂ.ಮಣಿ ಅಳಲು ತೋಡಿಕೊಂಡರು.

ಇನ್ನು ಬೆಂಕಿ ನಂದಿಸಲು ಹೋದ ಗೋದಾಮು ಪಕ್ಕದ ಮನೆಯ ಬನ್ನಪ್ಪನಿಗೆ ಎಂಬಾತನಿಗೆ ತೀವ್ರ ಗಾಯಗಳಾಗಿವೆ. ಕೂಲಿ ಕೆಲಸ ನಂಬಿದ್ದ ಬನ್ನಪ್ಪ ಮತ್ತವನ ತಾಯಿ ಸೇರಿದಂತೆ ಹಲವರ ಬದುಕು ದುಸ್ತರವಾಗಿದೆ.

ಆಟೋ ಓಡಿಸಿಕೊಂಡು ಚಿಕ್ಕ ಬಾಡಿಗೆ ಮನೆಯಲ್ಲಿದ್ದೆ. ಘಟನೆ ವೇಳೆ ಕೆಮಿಕಲ್ ಸ್ಫೋಟಿಸಿದ್ದರಿಂದ ಮನೆಯ ಗೋಡೆ ಕುಸಿದು, ಎಲ್ಲ ವಸ್ತುಗಳು ಅವಶೇಷಗಳಡಿ ಸಿಲುಕಿದವು. ಗೋಡೆಗಳು ಸಂಪೂರ್ಣವಾಗಿ ಕುಸಿಯುವ ಆತಂಕವಿದೆ. ಪತ್ನಿಯನ್ನು ತವರಿಗೆ ಕಳುಹಿಸಿದ್ದು, ನೆರೆಹೊರೆಯವರ ಕರುಣೆಯಲ್ಲಿ ಬದುಕುತ್ತಿದ್ದೇನೆ. ಕೊರೋನಾದಿಂದ ಬೇಸತ್ತ ನಮಗೆ ಗಾಯದ ಮೇಲೆ ಬರೆ ಎಳೆದಂತಾಗಿದೆ.

• **ರಾಜಾರಾವ್** ಸಂತ್ರಸ್ತ

### ಪರಿಹಾರ ಕೊಡಲು ಸಿದ್ಧ

ಬಿಬಿಎಂಪಿ ಅಧಿಕಾರಿಗಳು ಸ್ಥಳ ಪರಿಶೀಲಿಸಿ, ನಷ್ಟದ ಅಂದಾಜು ವೆಚ್ಚ ತಿಳಿಸಿದರೆ ಪರಿಹಾರ ಕೊಟ್ಟುಬಿಡುತ್ತೇನೆ. ಒಂದು ಮನೆಗೆ ಮಾತ್ರ ಹೆಚ್ಚು ಹಾನಿಯಾಗಿದ್ದು ಬಿಟ್ಟರೆ, ಮತ್ತಾವುದೇ ಮನೆಗಳಿಗೆ ಅಷ್ಟಾಗಿ ನಷ್ಟವಾಗಿಲ್ಲ ಎನ್ನುತ್ತಾರೆ ಗೋದಾಮು ಮಾಲೀಕ ಸಜ್ಜನ್‌ರಾಜ್.

ವಿಜಯ ಕರ್ನಾಟಕ

# ಮಾಸ್ಕ್ ಧರಿಸದ್ದಕ್ಕೆ 50 ಸಾವಿರ ರೂ ದಂಡ!

■ **ವಿಕ ಸುದ್ದಿಲೋಕ** ಬೆಂಗಳೂರು

ಮಾಸ್ಕ್ ಧರಿಸದೆ ಶಾಸಕ ರಾಜುಗೌಡ ಅವರ ಕಾರಿನಲ್ಲಿ ಪ್ರಯಾಣಿಸುತ್ತಿದ್ದ ವ್ಯಕ್ತಿಗೆ 250 ರೂ.ಗೆ ಬದಲು 50 ಸಾವಿರ ರೂ., ದಂಡ ವಿಧಿಸಿದ ರಸೀದಿ ನೀಡುವ ಮೂಲಕ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಮಾರ್ಷಲ್‌ಗಳು ಎಡವಟ್ಟು ಮಾಡಿರುವುದು ಶನಿವಾರ ಬೆಳಕಿಗೆ ಬಂದಿದೆ.

ಶಾಸಕ ರಾಜುಗೌಡ ಅವರು ಪ್ರಯಾಣಿಸುತ್ತಿದ್ದ ಕಾರನ್ನು ತಡೆದ ಮಾರ್ಷಲ್‌ಗಳು, ವ್ಯಕ್ತಿಯೊಬ್ಬರು ಮಾಸ್ಕ್ ಧರಿಸದೇ ಇರುವುದನ್ನು ಗಮನಿಸಿದ್ದಾರೆ. ಈ ವೇಳೆ ಕೂಡಲೇ ದಂಡ ವಿಧಿಸಲು ಮುಂದಾದ ಅವರು, ರಸೀದಿಯಲ್ಲಿ 50 ಸಾವಿರ ರೂ. ಎಂದು ದಂಡದ ಮೊತ್ತವನ್ನು ನಮೂದಿಸಿದ್ದಾರೆ.

ದಂಡ ಪಾವತಿಸಿದ ನಂತರ ಶಾಸಕರ ಕಾರು ಮುಂದೆ ಚಲಿಸಿದೆ. ಈ ವೇಳೆ ರಸೀದಿ ನೋಡಿದ ವ್ಯಕ್ತಿ ಹೌಹಾರಿದ್ದಾರೆ. ರಸೀದಿಯ ಫೋಟೋ ತೆಗೆದು ಸಾಮಾಜಿಕ ಜಾಲತಾಣಗಳಲ್ಲಿ ಹರಿಬಿಟ್ಟಿದ್ದಾರೆ.

ಘಟನೆ ಬೆಳಕಿಗೆ ಬರುತ್ತಿದ್ದಂತೆ ಪ್ರತಿಕ್ರಿಯಿಸಿದ ಬಿಬಿಎಂಪಿ, ''ಶಾಸಕರ ಕಾರಿನಲ್ಲಿ ಮಾಸ್ಕ್ ಧರಿಸದೇ ಇದ್ದ ವ್ಯಕ್ತಿಯಿಂದ ದಂಡದ ರೂಪದಲ್ಲಿ ನಿರ್ದಿಷ್ಟಪಡಿಸಿದ ಮೊತ್ತವನ್ನಷ್ಟೇ ಪಡೆಯಲಾಗಿದೆ. ಆದರೆ, ರಸೀದಿಯಲ್ಲಿ ತಪ್ಪಾಗಿ 50,000 ರೂಪಾಯಿ ಎಂದು ನಮೂದಿಸಲಾಗಿದೆ,'' ಎಂದು ಸ್ಪಷ್ಟನೆ ನೀಡಿದೆ.



ಮಾಜಿ ಪ್ರಧಾನಿ ಅಟಲ್ ಬಿಹಾರಿ ವಾಜಪೇಯಿ ಜನ್ಮದಿನದ ಅಂಗವಾಗಿ ಮಲ್ಲೇಶ್ವರದಲ್ಲಿ ಡಿಸಿಎಂ ಡಾ.ಸಿ.ಎನ್.ಅಶ್ವತ್ಥನಾರಾಯಣ ಅವರು ಪ್ರಾಮಾಣಿಕ, ಹಿರಿಯ ಆಟೋ ಚಾಲಕರನ್ನು ಸನ್ಮಾನಿಸಿದರು.

VK ವಿಜಯ ಕರ್ನಾಟಕ

# 471 ಹೊಸ ಕೊರೊನಾ ಪ್ರಕರಣ ಪತ್ತೆ

**ಬೆಂಗಳೂರು:** ನಗರದಲ್ಲಿ ಶುಕ್ರವಾರ 471 ಹೊಸ ಕೋವಿಡ್-19 ಪ್ರಕರಣಗಳು ಪತ್ತೆಯಾಗಿದ್ದು, 4 ಮಂದಿ ಸೋಂಕಿನಿಂದ ಮೃತಪಟ್ಟಿದ್ದಾರೆ. ಸೋಂಕಿನಿಂದ ಮುಕ್ತರಾಗಿ ನಾನಾ ಆಸ್ಪತ್ರೆಗಳಿಂದ 491 ಮಂದಿ ಬಿಡುಗಡೆಯಾಗಿದ್ದು, ಇದುವರೆಗೆ ಬಿಡುಗಡೆಗೊಂಡವರ ಸಂಖ್ಯೆ 3,72,970ಕ್ಕೇರಿದೆ. ಪ್ರಸ್ತುತ, 8,795 ಸಕ್ರಿಯ ಪ್ರಕರಣಗಳಿದ್ದು, ಒಟ್ಟು ಪ್ರಕರಣಗಳ ಸಂಖ್ಯೆ 3,86,057 ದಾಟಿದೆ. ಸೋಂಕಿನಿಂದ ಇದುವರೆಗೆ 4,291 ಮಂದಿ ಪ್ರಾಣ ಕಳೆದುಕೊಂಡಿದ್ದಾರೆ.

ವಿಜಯವಾಣಿ
ಕನ್ನಡಿಗರ ಧ್ವನಿ

ವಿಜಯವಾಣಿ ನಂ.1 ಕನ್ನಡ ದಿನಪತ್ರಿಕೆ

### ರಾಜಕಾರಣಿಗಳು, ಐಎಎಸ್, ಐಪಿಎಸ್ ಅಧಿಕಾರಿಗಳಿಗೆ ಲಸಿಕೆ | 480 ಮಂದಿಗೆ ಮಾತ್ರ ನೀಡಿಕೆ

# ಕೋವ್ಯಾಕ್ಸಿನ್ 3ನೇ ಹಂತದ ಪ್ರಯೋಗ ಕುಂಠಿತ

■ ವಿಜಯವಾಣಿ ಸುದ್ದಿಜಾಲ ಬೆಂಗಳೂರು

ಸ್ವಯಂಸೇವಕರ ಹಾಗೂ ಉತ್ಸಾಹಿತರ ಭಾಗವಹಿಸುವಿಕೆ ಇಲ್ಲದೆ ವೈದೇಹಿ ವೈದ್ಯಕೀಯ ವಿಜ್ಞಾನ ಸಂಸ್ಥೆ ಮತ್ತು ಸಂಶೋಧನಾ ಕೇಂದ್ರ ನಡೆಸುತ್ತಿರುವ ಕೋವಿಡ್ -19 ಲಸಿಕೆ (ಕೊವ್ಯಾಕ್ಸಿನ್) 3ನೇ ಹಂತದ ಕ್ಲಿನಿಕಲ್ ಪ್ರಯೋಗ ವೇಗ ಕಳೆದುಕೊಂಡಿದೆ.

**» ಭಾರತದಲ್ಲಿ ನಡೆಸುತ್ತಿರುವ ಅತಿದೊಡ್ಡ ಕ್ಲಿನಿಕಲ್ ಪ್ರಯೋಗ**

ಕೋವ್ಯಾಕ್ಸಿನ್ ಅಭಿವೃದ್ಧಿಪಡಿಸು ತ್ತಿರುವ ಹೈದರಾಬಾದ್ ಮೂಲಕ ಭಾರತ್ ಬಯೋಟೆಕ್ ಡಿ.23ರಂದು ತುರ್ತು ಬಳಕೆಯ ಅಧಿಕಾರಕ್ಕಾಗಿ ಭಾರತದ ಪ್ರಧಾನ ಔಷಧ ನಿಯಂತ್ರಕ (ಡಿಜಿಸಿಐ)ರಿಗೆ ಅರ್ಜಿ ಸಲ್ಲಿಸಿ ಮನವಿ ಮಾಡಿಕೊಂಡಿದೆ. ಡಿ.2ರಂದು ಪ್ರಯೋಗಗಳು ಪ್ರಾರಂಭವಾದಾಗ, ಆಸ್ಪತ್ರೆಯು ಒಂದು ವಾರದಲ್ಲಿ ಒಂದು ಸಾವಿರ ಸ್ವಯಂ ಸೇವಕರಿಗೆ ಲಸಿಕೆಯ ಮೊದಲ ಪ್ರಮಾಣವನ್ನು ನೀಡುವ ಗುರಿ ಹೊಂದಿತ್ತು. ಆದರೆ ಡಿ.26 ಕಳೆದರೂ 480 ಮಂದಿ ಮಾತ್ರ ಲಸಿಕೆ ಪಡೆದುಕೊಂಡಿದ್ದಾರೆ. ಸಾರ್ವಜನಿಕರಲ್ಲಿ ಉತ್ಸಾಹದ ಕೊರತೆಯಿಂದಾಗಿ ನಿರೀಕ್ಷತ ಗುರಿ ಸಾಧಿಸಲು ಸಾಧ್ಯವಾಗಿಲ್ಲ ಎಂದು ಕ್ಲಿಂಟ್ರಾಕ್ ನಿರ್ದೇಶಕಿ ಚೈತನ್ಯ ಆದಿಕೇಶವಲು ತಿಳಿಸಿದ್ದಾರೆ.

**ಪ್ರಾಯೋಗಿಕ ಲಸಿಕೆ ಪಡೆದ ಗಣ್ಯರು:** ಲಸಿಕೆ ಕರಿತು ಸಾರ್ವಜನಿಕರನ್ನು ಪ್ರೋತ್ಸಾಹಿಸಲು ರಾಜ್ಯದ ಚುನಾಯಿತ ಪ್ರತಿನಿಧಿಗಳು ಮತ್ತು ಸೆಲೆಬ್ರಿಟಿಗಳು ಸೇರಿದಂತೆ ಐಎಎಸ್, ಐಪಿಎಸ್ ಅಧಿಕಾರಿಗಳು ಸ್ವಯಂ ಪ್ರೇರಣೆಯಿಂದ ಪ್ರಯೋಗಗಳಲ್ಲಿ ಭಾಗವಹಿಸಿ ಮೊದಲ ಪ್ರಮಾಣ ಲಸಿಕೆಯನ್ನು ತೆಗೆದುಕೊಂಡಿದ್ದಾರೆ. 65 ಕ್ಕೂ ಹೆಚ್ಚು ಸ್ವಯಂಸೇವಕರು ಹಿರಿಯ ನಾಗರಿಕರು. ಆಸ್ಪತ್ರೆಗಳು ಪ್ರಯೋಗಗಳಿಗಾಗಿ ಸ್ವಾಯತ್ತ ಸಂಶೋಧನಾ ಸಂಸ್ಥೆಯಾದ ಕ್ಲಿಂಟ್ರಾಕ್ ಇಂಟರ್ನ್ಯಾಷನಲ್ ಲಿಮಿಟೆಡ್‌ಗೆ ಭೇಟಿ ನೀಡಿದ್ದಾರೆ. ಅಡ್ಡಪರಿಣಾಮಗಳ ಬಗ್ಗೆ ಆತಂಕಕ್ಕೊಳಗಾಗುವುದರಿಂದ ವಿಚಾರಣೆಯಲ್ಲಿ ಭಾಗವಹಿಸಲು ಜನರಲ್ಲಿ ಸ್ವಲ್ಪ ಹಿಂಜರಿಕೆ ಇದೆ. ಆದರೆ, ಲಸಿಕೆ ಸಂಪೂರ್ಣವಾಗಿ ಸುರಕ್ಷಿತವಾಗಿದೆ. ನಾನು ಮತ್ತು ನನ್ನ ಕುಟುಂಬ ಸೇರಿದಂತೆ ವೈದೇಹಿ ಆಸ್ಪತ್ರೆಯ ಹಲವಾರು ವೈದ್ಯರು ಡೋಸೇಜ್ ತೆಗೆದುಕೊಂಡಿದ್ದಾರೆ ಮತ್ತು ನಮ್ಮಲ್ಲಿ ಯಾರಿಗೂ ಯಾವುದೇ ಸಮಸ್ಯೆ ಇಲ್ಲ, ಎಂದು ಅವರು ಹೇಳಿದರು.




ಲಸಿಕೆ ಪಡೆದಿರುವ 480 ಸ್ವಯಂಸೇವಕರಲ್ಲಿ ಸುಮಾರು 120 ಮಂದಿ ರಾಜಕಾರಣಿಗಳು, ಐಎಎಸ್, ಐಪಿಎಸ್ ಅಧಿಕಾರಿಗಳು ಮತ್ತು ಇತರ ಕೆಲವು ಗಣ್ಯರು ಇದ್ದಾರೆ ಎಂದು ಚೈತನ್ಯ ಮಾಹಿತಿ ನೀಡಿದರು.

ನಂ.1 ವಿಜಯವಾಣಿ | ದಿಗ್ವಿಜಯ 24X7 NEWS
ಇವರ ಸಹಯೋಗದೊಂದಿಗೆ
kannada matrimony
ವಧು ಅಥವಾ ವರರನ್ನು ಹುಡುಕಲು ಸಹಾಯ ಬೇಕೆ?
ನಮಗೆ ಕರೆ ಮಾಡಿ 70928 77888, ನೋಂದಣಿ ಉಚಿತ!

## ಜನವರಿ 2ನೇ ವಾರ ಲಸಿಕೆ

ಆರೋಗ್ಯ ಕಾರ್ಯಕರ್ತರ ಆದ್ಯತೆಯ ಗುಂಪಿಗೆ ಜನವರಿ ಎರಡನೇ ವಾರದಲ್ಲಿ ಲಸಿಕೆ ಹೊರಡಿಸುವ ಯೋಜನೆ ಹೊಂದಿದ್ದು, ಇದಕ್ಕಾಗಿ, ನಾವು ವರ್ಷಾಂತ್ಯದ ವೇಳೆಗೆ 3ನೇ ಹಂತದ ಪ್ರಯೋಗಗಳನ್ನು ಪೂರ್ಣಗೊಳಿಸಬೇಕು. ಇದಕ್ಕಾಗಿ ಇನ್ನೂ 520 ಸ್ವಯಂಸೇವಕರು ಬೇಕಾಗಿದ್ದು, ಜನರು ಸ್ವಯಂ ಪ್ರೇರಿತರಾಗಿ ಮುಂದೆ ಬಂದು ಪ್ರಯೋಗಗಳಲ್ಲಿ ಭಾಗವಹಿಸಬೇಕೆಂದು ಮನವಿ ಮಾಡಿದ್ದಾರೆ. ಕೊವಾಕ್ಸಿನ್ ಕ್ಲಿನಿಕಲ್ ಪ್ರಯೋಗಗಳು ಎರಡು-ಡೋಸ್ ವೇಳಾಪಟ್ಟಿಯನ್ನು ಆಧರಿಸಿವೆ, ಇದನ್ನು 28 ದಿನಗಳ ಅಂತರದಲ್ಲಿ ನೀಡಲಾಗುತ್ತದೆ. ಲಸಿಕೆ ಪರಿಣಾಮಕಾರಿತ್ವವನ್ನು ಎರಡನೇ ಡೋಸ್ ನೀಡಿದ 14 ದಿನಗಳ ನಂತರ ನಿರ್ಧರಿಸಲಾಗುತ್ತದೆ. ಇದು ಭಾರತದಲ್ಲಿ ನಡೆಸಿದ ಅತಿದೊಡ್ಡ ಕ್ಲಿನಿಕಲ್ ಪ್ರಯೋಗವಾಗಿದೆ. ಹಾಗಾಗಿ ಇದರಲ್ಲಿ 18 ವರ್ಷಕ್ಕಿಂತ ಮೇಲ್ಪಟ್ಟ ಯಾರಾದರೂ ಭಾಗವಹಿಸಬಹುದು ಎಂದು ಪ್ರಯೋಗಗಳ ಸಹ-ತನಿಖಾಧಿಕಾರಿ ತಿಳಿಸಿದ್ದಾರೆ.

## ಸ್ವಯಂಸೇವಕರಾಗಬಹುದು

ಲಸಿಕೆ ಪಡೆಯುವ ಅಭ್ಯರ್ಥಿಗಳು ರೋಗ ಪ್ರತಿರೋಧಕ ಶಕ್ತಿ ಹೊಂದಿರುವುದರಿಂದ ಲಕ್ಷಣರಹಿತರಿಗೆ ಇದನ್ನು ನೀಡಲಾಗುತ್ತದೆ. ಸ್ವಯಂಸೇವಕರಾಗಲು ದೂ: 97394 19272ಗೆ ಕರೆ ಮಾಡಿ ಕೋವಾಕ್ಸಿನ್ ಕ್ಲಿನಿಕಲ್ ಟ್ರಯಲ್ ರೂಮ್‌ಗೆ ಸಂಪರ್ಕ ಹೊಂದಲು ಕೇಳಬಹುದು.

ವಿಜಯವಾಣಿ
ಕನ್ನಡಿಗರ ಧ್ವನಿ

ವಿಜಯವಾಣಿ ನಂ.1
ಕನ್ನಡ ದಿನಪತ್ರಿಕೆ

# ವೈರಸ್ ಗೊಂದಲಕ್ಕೆ ಇಂದು ತೆರೆ

## 10 ಜನರ ಜಿನೋಮಿಕ್ ಸೀಕ್ವೆನ್ಸಿಸ್ ಪರೀಕ್ಷೆ ವರದಿ ಬರುವ ಸಾಧ್ಯತೆ

■ ವಿಜಯವಾಣಿ ಸುದ್ದಿಜಾಲ ಬೆಂಗಳೂರು

ಕರೊನಾ ವೈರಸ್ ರೂಪಾಂತರಗೊಂಡಿರುವ ಹಿನ್ನೆಲೆಯಲ್ಲಿ ಯುಕೆಯಿಂದ ರಾಜ್ಯಕ್ಕೆ ಹಿಂದಿರುಗಿದ ನಂತರ ಕೋವಿಡ್ ಪರೀಕ್ಷೆಗೆ ಒಳಗಾಗಿ ಸೋಂಕು ದೃಢಪಟ್ಟ ಹತ್ತು ಮಂದಿಯ ಮಾದರಿಗಳನ್ನು ಜಿನೋಮಿಕ್ ಸೀಕ್ವೆನ್ಸಿಸ್ ಪರೀಕ್ಷೆಗೆ ಕಳುಹಿಸಲಾಗಿದ್ದು, ಇದೀಗ ಎಲ್ಲರ ಚಿತ್ತ ವರದಿಯ ಮೇಲಿದೆ.

ಶನಿವಾರ ಸುದ್ದಿಗಾರರೊಂದಿಗೆ ಆರೋಗ್ಯ ಸಚಿವ ಡಾ. ಕೆ. ಸುಧಾಕರ್ ಮಾತನಾಡಿ, ಭಾನುವಾರ ವರದಿ ಬರುವ ಸಾಧ್ಯತೆಯಿದೆ ಎಂದು ತಿಳಿಸಿದ್ದಾರೆ. ಯುಕೆಯಲ್ಲಿ ಕರೊನಾ ವೈರಸ್ ಈವರೆಗೂ 17 ರೀತಿಯಲ್ಲಿ ರೂಪಾಂತರಗೊಂಡಿದೆ. ಕಳೆದ ನ.22ರಿಂದ 38,500 ಪ್ರಯಾಣಿಕರು ಯುಕೆಯಿಂದ ಭಾರತಕ್ಕೆ ಬಂದಿದ್ದಾರೆ. ಇದರಲ್ಲಿ 2,500 ಮಂದಿ ಕರ್ನಾಟಕದವರಾಗಿದ್ದಾರೆ.



ಅವರಲ್ಲಿ 1,638 ಮಂದಿಗೆ ಪರೀಕ್ಷೆ ನಡೆಸಲಾಗಿದ್ದು, 14 ಮಂದಿಗೆ (ಡಿ.25ರವರೆಗೆ) ಸೋಂಕು ದೃಢಪಟ್ಟಿದ್ದು, ಅವರ ಮಾದರಿಗಳನ್ನು ರಾಷ್ಟ್ರೀಯ ಮಾನಸಿಕ ಆರೋಗ್ಯ ಮತ್ತು ನರವಿಜ್ಞಾನ ಸಂಸ್ಥೆಯ (ನಿಮ್ಹಾನ್ಸ್) ಪ್ರಯೋಗಾಲಯಕ್ಕೆ ಜಿನೋಮಿಕ್ ಸೀಕ್ವೆನ್ಸ್ ಪರೀಕ್ಷೆಗೆ ಕಳುಹಿಸಲಾಗಿದೆ ಎಂದು ಹೇಳಿದರು.

ಈ ಮಾದರಿಯ ಪರೀಕ್ಷೆಗೆ 48 ಗಂಟೆ ಬೇಕಾಗುತ್ತವೆ. ಪರೀಕ್ಷೆಯ ವರದಿಯನ್ನು ಪ್ರಯೋಗಾಲಯವು ಭಾರತೀಯ ವೈದ್ಯಕೀಯ ಸಂಶೋಧನಾ ಪರಿಷತ್ (ಐಸಿಎಂಆರ್)ಗೆ ಕಳುಹಿಸಲಿದೆ. ಜಿನೋಮಿಕ್ ಸೀಕ್ವೆನ್ಸಿಸ್ ಪರೀಕ್ಷೆಗೆ ಕೇಂದ್ರ ಸರ್ಕಾರವು ದೇಶದಲ್ಲಿ 10 ಪ್ರಯೋಗಾಲಯವನ್ನು ಗುರುತಿಸಿದೆ. ವಿವಿಧ ರಾಜ್ಯಗಳಿಂದ ಪರೀಕ್ಷಾ ವರದಿಯು ಐಸಿಎಂಆರ್‌ಗೆ ರವಾನೆಯಾಗಲಿದೆ. ಅದನ್ನು ಪ್ರಧಾನಿ ಕಚೇರಿಗೆ ಕಳುಹಿಸಲಾಗುತ್ತದೆ. ನಂತರ ಅಧಿಕೃತವಾಗಿ ಮಾಹಿತಿ ಹೊರಬರಲಿದೆ ಎಂದು ವಿವರಿಸಿದರು.




### ಲಸಿಕೆ ಪಡೆದುಕೊಳ್ಳಲು ಮನವಿ

ಕೋವ್ಯಾಕ್ಸಿನ್ ಲಸಿಕೆಯ ಮೂರನೇ ಹಂತದ ಪ್ರಯೋಗ ನಡೆಯುತ್ತಿದೆ. ಲಸಿಕೆಯನ್ನು ಪ್ರಾಯೋಗಿಕವಾಗಿ ಪಡೆಯಬಹುದು. ಕರೊನಾ ಯೋಧರಾಗಿ ಕಾರ್ಯನಿರ್ವಹಿಸುತ್ತಿರುವವರು ಇದರ ಲಾಭ ಪಡೆದುಕೊಂಡು ಕ್ಲಿನಿಕಲ್ ಟ್ರಯಲ್‌ಗೆ ಸಹಕರಿಸಬೇಕು ಎಂದು ಸುಧಾಕರ್ ಮನವಿ ಮಾಡಿದರು.

### ಶೀಘ್ರ ಹೊಸ ಮಾರ್ಗಸೂಚಿ

ಗೃಹ ಇಲಾಖೆಯೊಂದಿಗೆ ಸಭೆ ನಡೆಸಿ, ಭಾರತೀಯ ವೈದ್ಯಕೀಯ ಸಂಶೋಧನಾ ಪರಿಷತ್ (ಐಸಿಎಂಆರ್) ಸಲಹೆ ಪಡೆದು ಹೊಸ ಮಾದರಿ ಕರೊನಾ ನಿಯಂತ್ರಣದ ಮಾರ್ಗಸೂಚಿ ಅಂತಿಮಗೊಳಿಸಲಾಗುವುದು ಎಂದು ಸುಧಾಕರ್ ಹೇಳಿದರು.

ಕರೊನಾ ಯಮರ್ಜೆನ್ಸಿ
EMERGENCY

### ಯುಕೆಯಿಂದ ಬಂದ 9 ಮಂದಿಗೆ ಸೋಂಕು

**ಬೆಂಗಳೂರು:** ಯುಕೆಯಿಂದ ರಾಜ್ಯಕ್ಕೆ ಆಗಮಿಸಿದವರ ಪೈಕಿ ಮತ್ತೆ ಒಂಬತ್ತು ಮಂದಿಗೆ ಕರೊನಾ ಸೋಂಕು ದೃಢಪಟ್ಟಿದ್ದು, ಶನಿವಾರ ಆರ್‌ಟಿಪಿಸಿಆರ್ ಪರೀಕ್ಷೆಗೆ ಒಳಗಾದ 15 ಮಂದಿಯಲ್ಲಿ ಆರು ಮಂದಿ ವರದಿಗಾಗಿ ಕಾಯಲಾಗುತ್ತಿದೆ. ಮೈಸೂರಿನಲ್ಲಿ ಬ್ರಿಟನ್‌ನಿಂದ ಬಂದಿರುವ ಒಬ್ಬರಲ್ಲಿ ಕೋವಿಡ್ ದೃಢಪಟ್ಟಿದ್ದು, ಅವರ ಸಹೋದರನಿಗೂ ಸೋಂಕು ಕಾಣಿಸಿಕೊಂಡಿದೆ. ಇಬ್ಬರ ಗಂಟಲು ದ್ರವದ ಮಾದರಿಯನ್ನು ಜಿನೋಮಿಕ್ ಸೀಕ್ವೆನ್ಸಿಂಗ್ ಪರೀಕ್ಷೆಗಾಗಿ ಬೆಂಗಳೂರಿನ ನಿಮ್ಹಾನ್ಸ್ ಕೇಂದ್ರಕ್ಕೆ ರವಾನಿಸಲಾಗಿದೆ. ವ್ಯಕ್ತಿ ಸಂಪರ್ಕದಲ್ಲಿ ಮೂವರು, ದ್ವಿತೀಯ ಸಂಪರ್ಕದಲ್ಲಿ ಮೂವರು ಇದ್ದಾರೆ. ಈವರೆಗೂ ಯುಕೆಯಿಂದ ರಾಜ್ಯಕ್ಕೆ ಬಂದವರಲ್ಲಿ 1,434 (ಡಿ. 26ರವರೆಗೆ) ಮಂದಿಗೆ ಕೋವಿಡ್ ಪರೀಕ್ಷೆ ಮಾಡಲಾಗಿದ್ದು, 23 ಮಂದಿಗೆ ಸೋಂಕು ದೃಢಪಟ್ಟಿದ್ದು, 908 ಮಂದಿಯ ವರದಿ ನೆಗೆಟಿವ್ ಬಂದಿದೆ. ಇನ್ನೂ 503 ಮಂದಿಯ ವರದಿ ಬರಬೇಕಿದೆ.

ರಾಜ್ಯದಲ್ಲಿ ಸೋಂಕು ಪ್ರಮಾಣ ಮತ್ತಷ್ಟು ಇಳಿಕೆಯಾಗಿದ್ದು, ಹೊಸದಾಗಿ 857 ಮಂದಿಗೆ ಸೋಂಕು ತಗುಲಿದೆ. ಸೋಂಕಿತರ ಸಂಖ್ಯೆ 9.15 ಲಕ್ಷ ತಲುಪಿದೆ. 964 ಮಂದಿ ಆಸ್ಪತ್ರೆಯಿಂದ ಬಿಡುಗಡೆ ಹೊಂದಿದ್ದು, ಗುಣಮುಖರ ಸಂಖ್ಯೆ 8.89 ಲಕ್ಷಕ್ಕೆ ಏರಿಕೆಯಾಗಿದೆ. 7 ಸೋಂಕಿತರ ಸಾವಿನೊಂದಿಗೆ ಮೃತರ ಸಂಖ್ಯೆ 12,051 ತಲುಪಿದೆ. ಸದ್ಯ 13,394 ಸೋಂಕಿತರು ಚಿಕಿತ್ಸೆ ಪಡೆಯುತ್ತಿದ್ದಾರೆ. ಬೆಂಗಳೂರಿನಲ್ಲಿ 471 ಮಂದಿ ಸೋಂಕಿಗೆ ಒಳಗಾಗಿದ್ದಾರೆ.

ವಿಜಯವಾಣಿ
ಕನ್ನಡಿಗರ ಧ್ವನಿ

# ಸ್ವಚ್ಛ ಬೆಂಗಳೂರಿಗೆ ಜನ ಸಹಭಾಗಿತ್ವ

**ಬೆಂಗಳೂರು:** 'ಬೆಂಗಳೂರು ಮಿಷನ್ -2022'ಗೆ ಸಂಬಂಧಿಸಿದಂತೆ 'ಸ್ವಚ್ಛ ಬೆಂಗಳೂರು' ಅಂಶದಡಿ ಸಾರ್ವಜನಿಕರ ಸಹಭಾಗಿತ್ವ ಪಡೆದು ಕಾರ್ಯನಿರ್ವಹಿಸಬೇಕು ಎಂದು ಅಧಿಕಾರಿಗಳಿಗೆ ಬಿಬಿಎಂಪಿ ಆಡಳಿತಾ ಧಿಕಾರಿ ಗೌರವ್ ಗುಪ್ತ ಸೂಚನೆ ನೀಡಿದ್ದಾರೆ.

» **ಬಿಬಿಎಂಪಿ ಆಡಳಿತ ಅಧಿಕಾರಿ ಸಭೆ**

ನಾಗರಿಕ ಸಹಭಾಗಿತ್ವ ಯೋಜನೆ ಕುರಿತಂತೆ ಶನಿವಾರ ನಡೆದ ವಿಡಿಯೋ ಸಂವಾದದಲ್ಲಿ ಪಾಲ್ಗೊಂಡು, ಘನತ್ಯಾಜ್ಯ ವಿಲೇವಾರಿ ಪದ್ಧತಿಯಲ್ಲಿ ಸಾಕಷ್ಟು ಬದಲಾವಣೆ ತರಬೇಕಿದೆ. ಪಾಲಿಕೆ ಸಿಬ್ಬಂದಿ ಜತೆ ಸಾರ್ವಜನಿಕರು, ಸಂಸ್ಥೆಗಳು, ನಿವಾಸಿ ಸಂಘಗಳು ಸೇರಿ ಕೆಲಸ ಮಾಡಿದರೆ ತ್ವರಿತ ಬದಲಾವಣೆ ಕಾಣಲು ಹಾಗೂ ನಗರವನ್ನು ಇನ್ನಷ್ಟು ಸ್ವಚ್ಛವಾಗಿಡಲು ಸಾಧ್ಯ ಎಂದರು.

ನಗರದಲ್ಲಿ ಪಾಲಿಕೆ ವತಿಯಿಂದ ಕಸವನ್ನು ಸಂಗ್ರಹ, ವಿಲೇವಾರಿ ಮತ್ತು ಸಂಸ್ಕರಣೆ ಜತೆಗೆ ನಾಗರಿಕರಲ್ಲಿ ಅರಿವು ಮೂಡಿಸುವ ಕೆಲಸ ಮಾಡಬೇಕು. 198 ವಾರ್ಡ್‌ಗಳಲ್ಲಿ 750 ರಿಂದ 1000 ಮನೆಗೊಂದರಂತೆ 4,200 ಬ್ಲಾಕ್ ರಚಿಸಲಾಗಿದೆ. ಬ್ಲಾಕ್ ಮಟ್ಟದಲ್ಲಿ ಶುಚಿಮಿತ್ರನನ್ನು ಗುರುತಿಸುವುದು, ಲಿಂಕ್ ವರ್ಕರ್ಸ್‌ಗಳ ಮೂಲಕ ಜಾಗೃತಿ ಮೂಡಿಸಬೇಕು. ವಾರ್ಡ್ ಮಟ್ಟದಲ್ಲಿ ಮಾರ್ಷಲ್, ಕಿರಿಯ ಆರೋಗ್ಯ ಪರಿವೀಕ್ಷಕ ಹಾಗೂ ವಾರ್ಡ್ ಗೊಬ್ಬ ಸ್ವಯಂಸೇವಕರ ಮೂಲಕ ಅರಿವು ಮೂಡಿಸಬೇಕು. ಎಂದು ಘನತ್ಯಾಜ್ಯ ವಿಭಾಗದ ವಿಶೇಷ ಆಯುಕ್ತ ರಂದೀಪ್ ಅವರಿಗೆ ಸೂಚನೆ ನೀಡಿದರು.

ಉದಯವಾಣಿ
ಜನಮನದ ಜೀವನಾಡಿ

# ಸ್ವಚ್ಛ ಸರ್ವೇಕ್ಷಣ: ಆನ್‌ಲೈನ್ ಅಭಿಯಾನಕ್ಕೆ ಒತ್ತು

## ಕೊರೊನಾ ಭೀತಿ ಹಿನ್ನೆಲೆಯಲ್ಲಿ ಮನೆಯಿಂದಲೇ ಅಭಿಪ್ರಾಯ ತಿಳಿಸಲು ಮರೆಯಬೇಡಿ

• ಹಿತೇಶ್ ವೈ

**ಬೆಂಗಳೂರು:** ಕೊರೊನಾ ಭೀತಿಯ ನಡುವೆಯೇ ಕೇಂದ್ರ ಸರ್ಕಾರದ ಸ್ವಚ್ಛ ಸರ್ವೇಕ್ಷಣ ಭಾಗವಾದ ಜನಾಭಿಪ್ರಾಯ ಸಂಗ್ರಹ 2021ರ ಜನವರಿಯಿಂದ ರಾಜ್ಯದಲ್ಲಿ ಪ್ರಾರಂಭವಾಗಲಿದೆ. ಈ ಬಾರಿ ಜನ ಗುಂಪು ಸೇರುವ ಪ್ರದೇಶದಲ್ಲಿ ಅಭಿಯಾನ ನಡೆಸಿ ಸಾರ್ವಜನಿಕರಿಂದ ಅಭಿಪ್ರಾಯ ಸಂಗ್ರಹಿಸಲು ಸಾಧ್ಯವಿಲ್ಲ. ಆದರೆ, ಜನಾಭಿಪ್ರಾಯ ಸಂಗ್ರಹದಲ್ಲಿ ಹಿನ್ನಡೆಯಾದರೆ ಸ್ವಚ್ಛ ಸರ್ವೇಕ್ಷಣದಲ್ಲಿ ಅಂಕ ಕುಸಿಯುವ ಸಾಧ್ಯತೆ ಇದೆ. ಹೀಗಾಗಿ, ಬೆಂಗಳೂರು, ಮೈಸೂರು ಹಾಗೂ ಹುಬ್ಬಳಿ ಮತ್ತು ಧಾರವಾಡದಂತಹ ಮಹಾನಗರ ಪಾಲಿಕೆಗಳು ಸೇರಿದಂತೆ ವಿವಿಧ ಪಾಲಿಕೆಗಳು ಆನ್‌ಲೈನ್ ಮತ್ತು ಸಾಮಾಜಿಕ ಜಾಲತಾಣಗಳ ಮೂಲಕ ಜನಾಭಿಪ್ರಾಯ ಸಂಗ್ರಹಿಸಲು ಮುಂದಾಗಿವೆ.

ಸ್ವಚ್ಛ ಸರ್ವೇಕ್ಷಣದಲ್ಲಿ ಕಳಪೆ ಸಾಧನೆ ಮಾಡಿದ ಬಿಬಿಎಂಪಿ ಈ ಬಾರಿ ಉತ್ತಮ ರ್‍ಯಾಂಕ್ ನಿರೀಕ್ಷೆಯಲ್ಲಿದೆ. ಕಡಿಮೆ ಜನ ಸಂಖ್ಯೆ ಇದ್ದರೂ ಉತ್ತಮ ಸಾಧನೆ ಮಾಡಿದ್ದ ತುಮಕೂರು ಪಾಲಿಕೆಗೆ ಈ ಬಾರಿ ಸವಾಲು ಎದುರಾಗಿದೆ. ಮೊದಲಿನಿಂದಲೂ ಉತ್ತಮ ಪ್ರದರ್ಶನ ನೀಡುತ್ತಿರುವ ಮೈಸೂರು ಪಾಲಿಕೆ ಈ ಬಾರಿ 7 ಸ್ಟಾರ್ ರ್‍ಯಾಂಕಿಂಗ್‌ಗೆ ಅರ್ಜಿ ಸಲ್ಲಿಸಿದೆ. ರಾಜ್ಯದಲ್ಲಿ 5 ಸ್ಟಾರ್ (ಗಾರ್ಬೇಜ್ ಫ್ರೀ ಸಿಟಿ)ಯಲ್ಲಿ ಸ್ಥಾನ ಪಡೆದಿರುವ ಏಕೈಕ ನಗರ ಮೈಸೂರು. ಇದೀಗ ಏಳನೇ ಸ್ಟಾರ್‌ಗೆ ಅರ್ಜಿ ಸಲ್ಲಿಸಿದೆ.

**ಆನ್‌ಲೈನ್ ಅಭಿಪ್ರಾಯಕ್ಕೆ ಒತ್ತು:** 'ಕೊರೊನಾ ಸೋಂಕು ಇರುವ ಹಿನ್ನೆಲೆಯಲ್ಲಿ ಈ ಬಾರಿ ಆನ್ ಲೈನ್‌ನ ಮೂಲಕ ಮಾಹಿತಿ ಸಂಗ್ರಹ ಮಾಡಲು ಯೋಜನೆ ರೂಪಿಸಿಕೊಂಡಿದ್ದೇವೆ. ಮನೆಯಲ್ಲೇ ಕಾಂಪೋಸ್ಟಿಂಗ್ ಮಾಡುವುದು, ಕಸ ಸಂಸ್ಕರಣೆ ವಿಧಾನ ಹಾಗೂ ಪ್ಲಾಸ್ಟಿಕ್ ನಿಷೇಧದ ಬಗ್ಗೆ ವಿಡಿಯೋ ಮೂಲಕ ಸಾರ್ವಜನಿಕರಿಗೆ ಸ್ಪರ್ಧೆ ಏರ್ಪಡಿಸಲಾಗುವುದು' ಎನ್ನುತ್ತಾರೆ ಮೈಸೂರು ಮಹಾನಗರ ಪಾಲಿಕೆ ಆಯುಕ್ತ ಗುರುದತ್ತ ಹೆಗ್ಡೆ. ಈ ವಿಚಾರದಲ್ಲಿ ಹುಬ್ಬಳ್ಳಿ- ಧಾರವಾಡ ಮಹಾನಗರ ಪಾಲಿಕೆಯೂ ಹಿಂದುಳಿದಿಲ್ಲ, 'ಆಟೋ ಟಿಪ್ಪರ್ ಗಳಲ್ಲಿನ ಧ್ವನಿ ವರ್ಧಕ ಹಾಗೂ ರೇಡಿಯೋದ ಮೂಲಕ ಜನಾಭಿಪ್ರಾಯದಲ್ಲಿ ಭಾಗವಹಿಸುವಂತೆ ಸಾರ್ವಜನಿಕರಿಗೆ ಜಾಗೃತಿ ಮೂಡಿಸಲು ಯೋಜನೆ ರೂಪಿಸಿಕೊಳ್ಳಲಾಗಿದೆ. ಅದೇ ರೀತಿ ಟ್ವಿಟರ್ ಹಾಗೂ ಸಾಮಾಜಿಕ ಜಾಲತಾಣ ಬಳಸಿಕೊಳ್ಳುತ್ತೇವೆ' ಎಂದು ಹುಬ್ಬಳ್ಳಿ- ಧಾರವಾಡ ಪಾಲಿಕೆ ಆಯುಕ್ತ ಸುರೇಶ ಇಟ್ನಾಳ ತಿಳಿಸಿದರು.

ಕಳೆದ ಬಾರಿ ಜನಾಭಿಪ್ರಾಯದಲ್ಲಿ 56 ಸಾವಿರಕ್ಕೆ (ತುಮಕೂರಿಗಿಂತ ಕಳಪೆ) ಜನಾಭಿಪ್ರಾಯ ಬಿಬಿಎಂಪಿಯಲ್ಲಿ ದಾಖಲಾಗಿತ್ತು. ಈ ಸಂಬಂಧ ಪ್ರತಿಕ್ರಿಯಿಸಿದ ಬಿಬಿಎಂಪಿ ವಿಶೇಷ (ಘನತ್ಯಾಜ್ಯ ನಿರ್ವಹಣೆ) ಆಯುಕ್ತ ರಂದೀಪ್ ಅವರು, 'ಕಳೆದ ಬಾರಿ ಅತೀ ಕಡಿಮೆ ಜನಾಭಿಪ್ರಾಯ ಸಂಗ್ರಹವಾಗಿತ್ತು. ಹೀಗಾಗಿ, ರ್‍ಯಾಂಕ್‌ನಲ್ಲೂ ಹಿನ್ನಡೆ ಉಂಟಾಗಿತ್ತು. ಈ ಬಾರಿ ಜನಾಭಿಪ್ರಾಯ ಸಂಗ್ರಹಕ್ಕೆ ಹೆಚ್ಚಿನ ಒತ್ತು ನೀಡಲಾಗುವುದು ಎಂದು ಹೇಳಿದರು.

**ವಿವಿಧ ಮಾನದಂಡಗಳ ಮೇಲೆ ರ್‍ಯಾಂಕಿಂಗ್:** ಸರ್ವೇಕ್ಷಣದಲ್ಲಿ ಒಡಿಎಫ್ ಹಾಗೂ ಗಾರ್ಬೇಜ್ ಫ್ರೀ ಸಿಟಿ ಎಂಬ ಎರಡು ಮಾನದಂಡಗಳಿದ್ದು, ಇವುಗಳಲ್ಲಿ ವಿವಿಧ ಹಂತಗಳಿವೆ. ಇದರಲ್ಲಿ ನಗರ ಬಹಿಲು ಬಹಿರ್ದೆಸೆ ಮುಕ್ತ, ಶೌಚಾಲಯಗಳ ಲಭ್ಯತೆ ಹಾಗೂ ಸ್ವಚ್ಛತೆ ಸೇರಿದಂತೆ ವಿವಿಧ ಮಾನದಂಡಗಳನ್ನು ಪರಿಶೀಲಿಸಲಾಗುತ್ತದೆ.



### ರಾಜ್ಯದ ವಿವಿಧ ಪಾಲಿಕೆಗಳಲ್ಲಿ ನಿತ್ಯ ತ್ಯಾಜ್ಯ ಪ್ರಮಾಣ ಅಂದಾಜು ವಿವರ

| ನಗರ | ವಾರ್ಡ್ ಸಂ. | ಕಸ ಉತ್ಪತ್ತಿ (ಮೆ.ಟನ್) |
|---|---|---|
| ಬಳ್ಳಾರಿ | 35 | 180 |
| ಬೆಂಗಳೂರು | 198 | |
| ಬೆಳಗಾವಿ | 58 | 250 |
| ದಾವಣಗೆರೆ | 45 | 170 |
| ಹುಬ್ಬಳಿ- ಧಾರವಾಡ | 67 | 400 |
| ಕಲಬುರಗಿ | 55 | 247 |
| ಮಂಗಳೂರು | 60 | 276 |
| ಮೈಸೂರು | 65 | 450 |
| ಶಿವಮೊಗ್ಗ | 35 | 163 |
| ತುಮಕೂರು | 35 | 140 |
| ವಿಜಯಪುರ | 35 | 120 |

### ಯಾವುದಕ್ಕೆ ಎಷ್ಟು ಅಂಕ

| ವಿಭಾಗ | ಅಂಕ |
|---|---|
| ಸಾರ್ವಜನಿಕರ ಅಭಿಪ್ರಾಯ | 1,800 (ಶೇ.30) |
| ಕಸ ನಿರ್ವಹಣೆ ಮತ್ತು ವ್ಯವಸ್ಥೆ | 2,400 (ಶೇ.40) |
| ಪ್ರಮಾಣ ಪತ್ರ (ಒಡಿಎಫ್, ಗಾರ್ಬೇಜ್ ಫ್ರೀ) | 1,800 (ಶೇ.30) |
| ಒಟ್ಟು | 6 ಸಾವಿರ |

- **ರಾಜಧಾನಿಯಲ್ಲಿ ಸ್ವಚ್ಛತೆ ಕಾಪಾಡುವ, ಪ್ರಮುಖ ಸ್ಥಾನ ಗಳಿಸಲು ಪ್ರಯತ್ನ**
- **ಉತ್ತಮ ಸ್ಥಾನಕ್ಕಾಗಿ ಪಡೆಯಲು ಬೇಕು ಸಾರ್ವಜನಿಕರ ಸಹಕಾರ**

### ಸ್ವಚ್ಛ ಸರ್ವೇಕ್ಷಣದಲ್ಲಿ ಪರಿಶೀಲಿಸುವ ಪ್ರಮುಖ ಅಂಶಗಳು

- ನಿರ್ದಿಷ್ಟ ನಗರದಲ್ಲಿ ಕಸ ನಿರ್ವಹಣೆ,ನೈರ್ಮಲ್ಯ, ಶೌಚಾಲಯ ವ್ಯವಸ್ಥೆ ಹಾಗೂ ಜನಾಭಿಪ್ರಾಯ
- ನಗರದಲ್ಲಿ ಒಟ್ಟು ಉತ್ಪತ್ತಿಯಾಗುವ ಕಸದ ಪ್ರಮಾಣ ಹಾಗೂ ಕಸ ಗೊಬ್ಬರವಾಗುವ ಪ್ರಮಾಣ
- ಕಸದ ಡಬ್ಬಿ ಹಾಗೂ ಸ್ವಚ್ಛತೆ ಸೇರಿದಂತೆ ಹಲವು ಅಂಶಗಳು ಬಗ್ಗೆ ಪರಿಶೀಲನೆ

### ಜನಾಭಿಪ್ರಾಯ ಸಂಗ್ರಹದ ವೇಳೆ ಕೇಳುವ ಪ್ರಶ್ನೆಗಳು

1. ನಿಮ್ಮ ನಗರದ ಸ್ವಚ್ಛತೆಗೆ 100ಕ್ಕೆ ಎಷ್ಟು ಅಂಕ ನೀಡಲು ಬಯಸುತ್ತೀರ, ನಗರ ವಾಣಿಜ್ಯ ಮತ್ತು ಸಾರ್ವಜನಿಕ ಪ್ರದೇಶಗಳು ಸ್ವಚ್ಛವಾಗಿವೆಯೇ?
2. ಸ್ವಚ್ಛ ಸರ್ವೇಕ್ಷಣ್ ಅಭಿಯಾನದಲ್ಲಿ ನಿಮ್ಮ ನಗರ ಭಾಗವಹಿಸುತ್ತಿರುವ ಬಗ್ಗೆ ನಿಮಗೆ ಗೊತ್ತೆ. ಕಳೆದ ಬಾರಿಯ ರ್‍ಯಾಂಕ್ ಏನು?
3. ಸಾರ್ವಜನಿಕ ಪ್ರದೇಶಗಳಲ್ಲಿ ಶೌಚಾಲಯ ಸ್ವಚ್ಛವಾಗಿದೆಯೇ, ಗೂಗಲ್‌ನಲ್ಲಿ ಮಾಹಿತಿ ಸಿಗುತ್ತದೆಯೇ.
4. ನಗರದಲ್ಲಿ ಒಣ ಮತ್ತು ಹಸಿಕಸ ಪ್ರತ್ಯೇಕ ಸಂಗ್ರಹ ಮಾಡುತ್ತಾರೆಯೇ?

ಉದಯವಾಣಿ
ಜನಮನದ ಜೀವನಾಡಿ

# ರೂಪಾಂತರ ವೈರಸ್‌ಗೆ ಹೊಸ ಮಾರ್ಗಸೂಚಿ

## ಗೃಹ ಇಲಾಖೆ ಜತೆ ಚರ್ಚಿಸಿ ನಿರ್ಧಾರ ■ ಹೊಸ ವರ್ಷಕ್ಕೆ ಹೊಸ ನಿರ್ದೇಶನ: ಸಚಿವ ಡಾ.ಕೆ.ಸುಧಾಕರ್

**ಬೆಂಗಳೂರು:** ಬ್ರಿಟನ್ ರೂಪಾಂತರ ಕೊರೊನಾ ವೈರಸ್ ನಿಯಂತ್ರಣಕ್ಕೆ ಸಂಬಂಧಿಸಿದಂತೆ ಗೃಹ ಇಲಾಖೆಯೊಂದಿಗೆ ಸಭೆ ನಡೆಸಿ ಹೊಸವರ್ಷಾಚಾರಣೆಗೆ ಮಾರ್ಗಸೂಚಿ ರೂಪಿಸಲಾಗುವುದು ಎಂದು ಆರೋಗ್ಯ ಮತ್ತು ವೈದ್ಯಕೀಯ ಶಿಕ್ಷಣ ಸಚಿವ ಡಾ.ಕೆ.ಸುಧಾಕರ್ ತಿಳಿಸಿದರು.



ಸುದ್ದಿಗಾರರ ಜತೆ ಮಾತನಾಡಿ, ಎರಡನೇ ಅಲೆ ಮತ್ತು ರೂಪಾಂತರ ಕೊರೊನಾ ತಡೆಗಟ್ಟಲು ಅಗತ್ಯ ಕ್ರಮ ಕೈಗೊಳ್ಳಲಾಗುತ್ತಿದೆ. ಹೊಸ ವರ್ಷ ಸಂಭ್ರಮಾಚರಣೆಯಿಂದ ಸೋಂಕು ಹೆಚ್ಚಳವಾಗುವ ಸಾಧ್ಯತೆಗಳಿವೆ. ಹೀಗಾಗಿಯೇ, ಹೊಸ ವರ್ಷಕ್ಕೆ ಹೊಸ ಮಾರ್ಗಸೂಚಿ ರೂಪಿಸ ಬೇಕಿದೆ. ಇದಕ್ಕಾಗಿ ಗೃಹ ಇಲಾಖೆಯ ಜೊತೆ ಸಭೆ ನಡೆಸಲಾಗುತ್ತದೆ. ತಜ್ಞರ ಸಲಹೆಯನ್ನೂ ಪಡೆಯಲಾಗುತ್ತದೆ. ಶೀಘ್ರದಲ್ಲಿಯೇ ಹೊಸ ಮಾರ್ಗಸೂಚಿ ಬಿಡುಗಡೆ ಮಾಡಲಾಗುವುದು ಎಂದು ಹೇಳಿದರು.

ಇಂಗ್ಲೆಂಡ್‌ನಿಂದ ಬಂದ ಪ್ರಯಾಣಿಕರ ಪೈಕಿ ಸೋಂಕು ದೃಢಪಟ್ಟವರ ಮಾದರಿಯನ್ನು ನಿಮ್ಹಾನ್ಸ್‌ನ ಪ್ರಯೋಗಾಲಯಕ್ಕೆ ಕಳುಹಿಸಲಾಗಿದೆ. ಈ ಮಾದರಿಗಳನ್ನು ವಂಶವಾಹಿನಿ ಪರೀಕ್ಷೆ (ಜೆನೆಟಿಕ್ ಸೀಕ್ವೆನ್ಸಿಂಗ್) ಒಳಪಡಿಸಲಾಗಿದೆ. ಇದಕ್ಕೆ 48 ಗಂಟೆ ಬೇಕಾಗುತ್ತದೆ. ವರದಿ ಬಂದ ಬಳಿಕ ಕೇಂದ್ರ ಸರ್ಕಾರಕ್ಕೆ ಮಾಹಿತಿ ನೀಡಲಾಗುವುದು. ಇಡೀ ದೇಶದಲ್ಲಿ ಯು.ಕೆ.ಯಿಂದ ಒಟ್ಟು 38,500 ಜನರು ಬಂದಿದ್ದಾರೆ. ಎಲ್ಲ ರಾಜ್ಯಗಳಿಂದ ಬಂದ ಮಾದರಿ, ವರದಿಯನ್ನು ಕಲೆಹಾಕಿ ಅಂತಿಮ ವರದಿಯನ್ನು ಐಸಿಎಂಆರ್ ಪ್ರಕಟಿಸಲಿದೆ ಎಂದು ಮಾಹಿತಿ ನೀಡಿದರು.

ಸದ್ಯ ರಾಜ್ಯದಲ್ಲಿ ಬೆಂಗಳೂರು, ಮಂಗಳೂರು ವಿಮಾನ ನಿಲ್ದಾಣ, ಮಂಗಳೂರು ಮತ್ತು ಕಾರವಾರ ಬಂದರಿನಲ್ಲಿ ಸೂಕ್ತ ತಪಾಸಣೆ ವ್ಯವಸ್ಥೆ ಇದೆ. ನೆಗೆಟಿವ್ ವರದಿ ಇಲ್ಲದವರನ್ನೂ ನಿಲ್ದಾಣದಲ್ಲೇ ಕೊರೊನಾ ಪರೀಕ್ಷೆಗೆ ಒಳಪಡಿಸಲಾಗುತ್ತಿದೆ ಎಂದು ತಿಳಿಸಿದರು.

### ಲಸಿಕೆ ಪ್ರಯೋಗದಲ್ಲಿ ಭಾಗವಹಿಸುವಂತೆ ಸಚಿವರ ಮನವಿ

ರಾಜ್ಯದಲ್ಲಿ ಕೋವ್ಯಾಕ್ಸಿನ್ ಲಸಿಕೆಯ ಮೂರನೇ ಹಂತದ ಪ್ರಯೋಗ ನಡೆಯುತ್ತಿದೆ. ಈ ಲಸಿಕೆಯನ್ನು ಪ್ರಾಯೋಗಿಕವಾಗಿ ಪಡೆಯಬಹುದು. ಸಾರ್ವಜನಿಕರು ಕೂಡ ಸ್ವಯಂ ಸೇವಕರಾಗಿ ಭಾಗವಹಿಸಬಹುದು. ಕೊರೊನಾ ವಾರಿಯರ್‌ಗಳಾಗಿ ಕಾರ್ಯನಿರ್ವಹಿಸುತ್ತಿರುವವರು ಈ ಲಸಿಕೆಯನ್ನು ಪಡೆದು ಪ್ರಯೋಗದಲ್ಲಿ ಪಾಲ್ಗೊಳ್ಳಿ. ಈ ಮೂಲಕ ಕ್ಲಿನಿಕಲ್ ಟ್ರಯಲ್ ನಲ್ಲಿ ಪಾಲ್ಗೊಂಡು ಸಹಾಯವಾಗಲಿದೆ ಎಂದು ಆರೋಗ್ಯ ಸಚಿವ ಡಾ.ಕೆ.ಸುಧಾಕರ್ ಮನವಿ ಮಾಡಿದರು. ನಗರದ ವೈದೇಹಿ ವೈದ್ಯಕೀಯ ಕಾಲೇಜಿನಲ್ಲಿ ನಡೆಯುತ್ತಿರುವ ಕೊರೊನಾ ಲಸಿಕೆಯಲ್ಲಿ ಜನಪ್ರತಿನಿಧಿಗಳು, ಐಎಎಸ್, ಐಪಿಎಸ್ ಅಧಿಕಾರಿಗಳು ಭಾಗವಹಿಸಿ ಲಸಿಕೆ ಪಡೆದಿದ್ದಾರೆ. ಯಾವುದೇ ಅಡ್ಡಪರಿಣಾಮ ಕಂಡುಬಂದಿಲ್ಲ. ಪ್ರಯೋಗಕ್ಕೆ ಒಟ್ಟು 1,000 ಮಂದಿ ಅಗತ್ಯವಿದ್ದು, ಸದ್ಯ 400 ಮಂದಿ ಮಾತ್ರ ಆಗಮಿಸಿದ್ದಾರೆ. ಪ್ರಯೋಗಕ್ಕೆ ಸ್ವಯಂ ಸೇವಕರ ಕೊರತೆ ಎದುರಾಗಿದ್ದು, ಆಸಕ್ತ ಸಾರ್ವಜನಿಕರು ಸ್ವಯಂ ಸೇವಕರಾಗಿ ಭಾಗವಹಿಸಬಹುದು ಎಂಬ ಕುರಿತು ಶನಿವಾರ ಉದಯವಾಣಿ ಮುಖಮುಖದಲ್ಲಿ 'ಟೆಸ್ಟ್ ಗೆದ್ದ ನಾಯಕರು' ಎಂಬ ಶೀರ್ಷಿಕೆಯಲ್ಲಿ ವಿಶೇಷ ವರದಿ ಪ್ರಕಟವಾಗಿತ್ತು. ಇದರ ಬೆನ್ನಲ್ಲೇ ಸಚಿವರು ಪ್ರಯೋಗದಲ್ಲಿ ಭಾಗವಹಿಸಲು ಕರೆ ನೀಡಿದ್ದಾರೆ.



ಶನಿವಾರ ಉದಯವಾಣಿಯಲ್ಲಿ ಪ್ರಕಟವಾಗಿದ್ದ ವಿಶೇಷ ವರದಿ

### ಶನಿವಾರ 10 ಮಂದಿ ಪಾಸಿಟಿವ್

ಇಂಗ್ಲೆಂಡ್‌ನಿಂದ ಬಂದ ಪ್ರಯಾಣಿಕರ ಪೈಕಿ ಶನಿವಾರ 9 ಮಂದಿಯಲ್ಲಿ ಸೋಂಕು ದೃಢಪಟ್ಟಿದ್ದು, ಒಟ್ಟಾರೆ 23 ಮಂದಿಯಲ್ಲಿ ಸೋಂಕು ದೃಢಪಟ್ಟಂತಾಗಿದೆ. ಈವರೆಗೂ 1434 ಮಂದಿ ಪರೀಕ್ಷೆಗೊಳಗಾಗಿದ್ದು, 908 ನೆಗೆಟಿವ್ ವರದಿ ಬಂದಿದ್ದು, 23 ಪಾಸಿಟಿವ್ ಬಂದಿದೆ. ಬಾಕಿ 503 ಮಂದಿ ಪರೀಕ್ಷಾ ವರದಿ ಬರಬೇಕಿದೆ. ಪಾಸಿಟಿವ್ ಪ್ರಕರಣಗಳ ಪೈಕಿ 11 ಬೆಂಗಳೂರಿನಲ್ಲಿ ವರದಿಯಾಗಿದೆ. ಇನ್ನು ಸೋಂಕು ದೃಢಪಟ್ಟವರನ್ನು ಜಿಲ್ಲಾಸ್ಪತ್ರೆಯ ಐಸೋಲೇಷನ್ ವಾರ್ಡ್‌ನಲ್ಲಿಟ್ಟು ಚಿಕಿತ್ಸೆ ನೀಡಲಾಗುತ್ತಿದೆ.

ಉದಯವಾಣಿ
ಜನಮನದ ಜೀವನಾಡಿ

# 14 ಮಂದಿಗೆ ಸೋಂಕು

**ಬೆಂಗಳೂರು:** ನಗರಕ್ಕೆ ಬ್ರಿಟನ್‌ನಿಂದ ಒಟ್ಟು 1,768 ಜನ ಇಲ್ಲಿಯ ವರೆಗೆ ಬಂದಿದ್ದು ಇವರಲ್ಲಿ ಶನಿವಾರ ಮೂವರಿಗೆ ಸೋಂಕು ದೃಢಪಟ್ಟಿದೆ. ಈ ಮೂಲಕ ನಗರದಲ್ಲಿ ಬ್ರಿಟನ್‌ನಿಂದ ಬಂದು ಸೋಂಕು ದೃಢಪಟ್ಟವರ ಸಂಖ್ಯೆ 14ಕ್ಕೆ ಏರಿಕೆಯಾದಂತಾಗಿದೆ.

ಅದೇ ರೀತಿ ಪಾಲಿಕೆಯ ಆರೋಗ್ಯಾಧಿಕಾರಿಗಳ ಸಂಪರ್ಕಕ್ಕೆ ಸಿಗದ ಪ್ರಯಾಣಿಕರ ಸಂಖ್ಯೆಯಲ್ಲೂ ಹೆಚ್ಚಳವಾಗಿದೆ. 1,768 ಜನರಲ್ಲಿ ಇಲ್ಲಿಯವರೆಗೆ ಒಟ್ಟು 902 ಜನರನ್ನು ಸೋಂಕು ಪರೀಕ್ಷೆಗೆ ಒಳಪಡಿಸಲಾಗಿದ್ದು, 587 ಜನರನ್ನು ಇನ್ನಷ್ಟೇ ಪರೀಕ್ಷೆಗೆ ಒಳಪಡಿಸಬೇಕಾಗಿದೆ.

**220 ಜನ ನಾಪತ್ತೆ:** ಒಂದೆಡೆ ಬ್ರಿಟನ್‌ನಿಂದ ಪ್ರಯಾಣಿಕರಲ್ಲಿ ಸೋಂಕು ದೃಢಪಡುತ್ತಿದೆ. ಇದೇ ವೇಳೆ ಸಂಪರ್ಕಕ್ಕೆ ಸಿಗದೆ ಇರುವವರ ಸಂಖ್ಯೆ ಹೆಚ್ಚಾಗುತ್ತಿರುವುದು ಆತಂಕಕ್ಕೆ ಕಾರಣವಾಗಿದೆ. 220 ಜನರಲ್ಲಿ ಹಲವರ ಮೊಬೈಲ್ ಸ್ವಿಚ್ ಆಫ್ ಆಗಿದೆ. ಅಲ್ಲದೆ, ನೀಡಿದ ವಿಳಾಸದಲ್ಲಿ ವಾಸವಿಲ್ಲ, ಹೀಗಾಗಿ ಪತ್ತೆ ಕಾರ್ಯ ಸಮಸ್ಯೆ ಆಗಿದೆ.

ಸಂಯುಕ್ತ ಕರ್ನಾಟಕ

# ಸ್ವಚ್ಛತೆಗೆ ಸಹಕಾರ ಅಗತ್ಯ

**ಸಂ.ಕ.ಸಮಾಚಾರ ಬೆಂಗಳೂರು**

- ಸಾರ್ವಜನಿಕರಿಗೆ ಜಾಗೃತಿ
- 42,00 ಬ್ಲಾಕ್‌ಗಳ ರಚನೆ
- ಬ್ಲಾಕ್ ಮಟ್ಟದಲ್ಲಿ ಶುಚಿಮಿತ್ರ

ನಾಗರಿಕ ಸಂಸ್ಥೆಗಳು, ನಿವಾಸಿಗಳ ಸಂಘಗಳು ಸೇರಿದಂತೆ ನಾಗರಿಕರ ಸಹಕಾರ ಇದ್ದಲ್ಲಿ ಮಾತ್ರ ಸ್ವಚ್ಛ ಬೆಂಗಳೂರು ನಿರ್ಮಾಣ ಸಾಧ್ಯ ಎಂದು ಬಿಬಿಎಂಪಿ ಆಡಳಿತಾಧಿಕಾರಿ ಗೌರವ್ ಗುಪ್ತ ತಿಳಿಸಿದ್ದಾರೆ.

'ಬೆಂಗಳೂರು ಮಿಷನ್-2022'ಗೆ ಸಂಬಂಧಿಸಿದಂತೆ 'ಸ್ವಚ್ಛ ಬೆಂಗಳೂರು' ಕುರಿತು ನಗರದ ವಿವಿಧ ಸ್ವಯಂ ಸೇವಾ ಸಂಸ್ಥೆಗಳ ಪ್ರತಿನಿಧಿಗಳೊಂದಿಗೆ ವಿಡಿಯೋ ಕಾನ್ಫರೆನ್ಸ್ ನಡೆಸಿ ಮಾತನಾಡಿದ ಅವರು, ಸ್ಥಳೀಯ ನಾಗರಿಕ ಸಂಸ್ಥೆಗಳು, ನಿವಾಸಿ ಸಂಘಗಳು (ಆರ್‌ಡಬ್ಲ್ಯೂಎ) ಸಹಭಾಗಿತ್ವದಿಂದ ನಗರದ ಸ್ವಚ್ಛತೆ ಮತ್ತು ಕಸದ ಸಮಸ್ಯೆ ನಿವಾರಣೆ ಮಾಡಲು ಸಾಧ್ಯ ಎಂದರು.



ನಗರದ ಸ್ವಚ್ಛತೆ ಮತ್ತು ಕಸ ವಿಲೇವಾರಿ ವಿಷಯದಲ್ಲಿ ಸಾಕಷ್ಟು ಬದಲಾವಣೆ ಮಾಡಬೇಕಿದ್ದು ಈ ಬಗ್ಗೆ ಪಾಲಿಕೆ ಅಧಿಕಾರಿಗಳು ಸ್ವಯಂ ಸೇವಾ ಸಂಸ್ಥೆಗಳ ಪ್ರತಿನಿಧಿಗಳೊಂದಿಗೆ ನಿರಂತರ ಚರ್ಚೆ ನಡೆಸಿ ಪರಿಹಾರ ಕಂಡುಕೊಳ್ಳುವಂತೆ ನಿರ್ದೇಶಿಸಿದರು.

ಕಸ ಸಂಗ್ರಹ, ವಿಲೇವಾರಿ ಮತ್ತು ಸಂಸ್ಕರಣೆ ಬಗ್ಗೆ ನಾಗರಿಕರಲ್ಲಿ ಅರಿವು ಮೂಡಿಸುವ ಕೆಲಸ ಮಾಡಬೇಕು. ಪ್ರತಿವಾರ್ಡ್‌ನಲ್ಲಿ 750 ರಿಂದ 1 ಸಾವಿರ ಮನೆಗಳಿಗೆ ಒಂದು ಬ್ಲಾಕ್ ರಚನೆ ಮಾಡಲಾಗಿದ್ದು ಒಟ್ಟು 4,200 ಬ್ಲಾಕ್‌ಗಳನ್ನು ರಚಿಸಲಾಗಿದೆ. ಈ ಪೈಕಿ ಬ್ಲಾಕ್ ಮಟ್ಟದಲ್ಲಿ ಶುಚಿ ಮಿತ್ರನನ್ನು ಗುರುತಿಸುವುದು, ಲಿಂಕ್ ವರ್ಕರ್ಸ್, ವಾರ್ಡ್ ಮಟ್ಟದಲ್ಲಿ ಮಾರ್ಷಲ್, ಕಿರಿಯ ಆರೋಗ್ಯ ಪರಿವೀಕ್ಷಕ, ಒಬ್ಬ ಸ್ವಯಂ ಸೇವಕರ ನೇಮಿಸುವುದು. ಘನತ್ಯಾಜ್ಯದ ಬಗ್ಗೆ ಸೂಕ್ತ ತರಬೇತಿ ನೀಡಲು ವಿಧಾನಸಭಾ ಕ್ಷೇತ್ರಕ್ಕೊಬ್ಬ ಮಾಸ್ಟರ್ ಟ್ರೈನರ್ ಗುರುತಿಸಿ ಸಾರ್ವಜನಿಕರಿಗೆ ಜಾಗೃತಿ ಮೂಡಿಸುವುದು. ಪ್ರಮುಖವಾಗಿ ಸ್ಥಳೀಯ ಸಾರ್ವಜನಿಕರು, ಸಂಸ್ಥೆಗಳು ಭಾಗಿಯಾಗಿಸಿಕೊಂಡು ಕಸದ ಸಮಸ್ಯೆ ನಿವಾರಣೆಗೆ ಅಗತ್ಯ ಕ್ರಮವಹಿಸಬೇಕೆಂದು ಹೇಳಿದರು.

ಘನತ್ಯಾಜ್ಯ ವಿಲೇವಾರಿಯ ಬಗ್ಗೆ ಅಧಿಕಾರಿಗಳೊಂದಿಗೆ ಪ್ರಗತಿ ಪರಿಶೀಲನಾ ಸಭೆ ನಡೆಸಿ ವರದಿ ಪಡೆಯಲು ಘನತ್ಯಾಜ್ಯ ವಿಭಾಗದ ವಿಶೇಷ ಆಯುಕ್ತ ರಂದೀಪ್ ಅವರಿಗೆ ಇದೇ ವೇಳೆ ಆಡಳಿತಾಧಿಕಾರಿಗಳು ಸೂಚಿಸಿದರು.

ಸಭೆಯಲ್ಲಿ ಜಂಟಿ ಆಯುಕ್ತರು (ಘನತ್ಯಾಜ್ಯ) ಸರ್ಫರಾಜ್ ಖಾನ್, ಮುಖ್ಯ ಎಂಜಿನಿಯರ್ ವಿಶ್ವನಾಥ್, ಅಧೀಕ್ಷಕ ಎಂಜಿನಿಯರ್ ಬಸವರಾಜ್ ಕಬಾಡೆ, ವಲಯ ಜಂಟಿ ಆಯುಕ್ತರು ಮತ್ತಿತರರಿದ್ದರು.

ಸಂಯುಕ್ತ ಕರ್ನಾಟಕ Sun, 27 December 2020
epaper.samyukthakarnataka.com/c/57304800

ಸಂಯುಕ್ತ ಕರ್ನಾಟಕ

# ಹೊಸ ವರ್ಷಾಚರಣೆಗೆ ನಿರ್ಬಂಧ

ಸಂ.ಕ. ಸಮಾಚಾರ ಬೆಂಗಳೂರು

ರೂಪಾಂತರಿ ಕೊರೊನಾದಿಂದ ಆತಂಕ ಸೃಷ್ಟಿಯಾಗಿರುವುದರಿಂದ ಈ ಬಾರಿ ಹೊಸ ವರ್ಷಾಚರಣೆಗೆ ನಿಬಂಧಗಳನ್ನು ಹೇರಲಾಗುತ್ತದೆ ಎಂದು ಗೃಹ ಸಚಿವ ಬಸವರಾಜ ಬೊಮ್ಮಾಯಿ ತಿಳಿಸಿದ್ದಾರೆ.

ಸುದ್ದಿಗಾರರ ಜೊತೆ ಮಾತನಾಡಿದ ಅವರು, ಕೊರೊನಾ ನಿಯಂತ್ರಣ ಒಂದು ಹಂತಕ್ಕೆ ಬರುತ್ತಿತ್ತು. ಈ ಸಂದರ್ಭದಲ್ಲಿ ಬ್ರಿಟನ್ ರೂಪಾಂತರಿ ಆತಂಕ ಹುಟ್ಟಿಸಿದೆ. ಹೊಸ ವರ್ಷಕ್ಕೆ ಹೆಚ್ಚು ಜನ ಸೇರುತ್ತಾರೆ. ಇದಕ್ಕಾಗಿ ಕೆಲವು ನಿರ್ಬಂಧ ಹೇರಲೇಬೇಕಾಗಿದೆ ಎಂದರು.

ಬೆಂಗಳೂರು ಮಾತ್ರವಲ್ಲದೆ, ಬೇರೆ ಜಿಲ್ಲೆಗಳಲ್ಲೂ ಹೊಸ ವರ್ಷಾಚರಣೆಗೆ ಅವಕಾಶವಿಲ್ಲ. ಪ್ರತಿ ಜಿಲ್ಲೆಗಳ ಪೊಲೀಸ್ ವರಿಷ್ಠಾಧಿಕಾರಿಗಳಿಗೆ ಸೂಚನೆ ನೀಡಲಾಗಿದೆ.



ಕರಾವಳಿ ಭಾಗದಲ್ಲಿ ಸಮುದ್ರದ ತೀರಗಳಲ್ಲಿಯಾಗಲೀ, ರೆಸಾರ್ಟ್‌ಗಳಲ್ಲಾಗಲೀ ಗಿರಿಧಾಮಗಳಲ್ಲಿ ಗುಂಪು ಸೇರಿ ಕೊಂಡು ವರ್ಷಾಚರಣೆಗೆ ಅವಕಾಶವಿಲ್ಲ ಎಂದು ತಿಳಿಸಿದರು.

ಈಗಾಗಲೇ ಕಂದಾಯ ಸಚಿವರ ಜೊತೆ ಈ ಸಂಬಂಧ ಒಂದು ಸುತ್ತಿನ ಮಾತುಕತೆ ನಡೆದಿದೆ. ಬಿಬಿಎಂಪಿ ಮತ್ತು ನಗರ ಪೊಲೀಸ್ ಆಯುಕ್ತರು ಚರ್ಚಿಸಿ ಮಾರ್ಗಸೂಚಿ ಸಿದ್ಧಪಡಿಸ್ತಾರೆ. ಹೊರ ದೇಶಗಳಿಂದ ಬರುವವರ ಮೇಲೆ ನಿಗಾ ಇಡಲಾಗುತ್ತದೆ. ವಿಮಾನ ನಿಲ್ದಾಣಗಳಲ್ಲಿ ವಿಶೇಷ ನಿಗಾ ಇರಿಸಲಾಗತ್ತದೆ. ಯುರೋಪ್ ದೇಶಗಳಿಂದ ಬಂದವರಿಗೆ ಪರೀಕ್ಷೆ ನಡೆಸಲಾಗುತ್ತದೆ. ಈಗಾಗಲೇ ಬಂದಿರುವವರ ಪತ್ತೆಗೆ ಪೊಲೀಸರಿಗೆ ಸೂಚಿಸಲಾಗಿದೆ. ಬೆಂಗಳೂರು ಮತ್ತು ಮಂಗಳೂರು ವಿಮಾನ ನಿಲ್ದಾಣಗಳಲ್ಲಿ ಬಿಗಿ ನಿಗಾ ವಹಿಸಲಾಗುತ್ತದೆ ಎಂದು ಹೇಳಿದರು.

ಸಂಯುಕ್ತ ಕರ್ನಾಟಕ

# 471 ಮಂದಿಗೆ ಕೊರೊನಾ

**ಸಂ.ಕ.ಸಮಾಚಾರ ಬೆಂಗಳೂರು**

ದಿನದಿಂದ ದಿನಕ್ಕೆ ಕೊರೊನಾ ಅಬ್ಬರ ಕಡಿಮೆಯಾಗುತ್ತಿದೆ. ಕಳೆದ 24 ಗಂಟೆಗಳಲ್ಲಿ ರಾಜಧಾನಿ ಬೆಂಗಳೂರಿನಲ್ಲಿ 471 ಮಂದಿಗೆ ಕೊರೊನಾ ಸೋಂಕು ದೃಢಪಟ್ಟಿದ್ದು ನಾಲ್ವರು ಸೋಂಕಿತು ಸಾವನ್ನಪ್ಪಿದ್ದಾರೆ.



ರಾಜ್ಯದಲ್ಲಿ ಶನಿವಾರ 857 ಪಾಸಿಟಿವ್ ಪ್ರಕರಣಗಳು ವರದಿಯಾಗಿವೆ. ಇದರೊಂದಿಗೆ ಸೋಂಕಿತರ ಸಂಖ್ಯೆ 9,15,345ಕ್ಕೆ ಏರಿಕೆಯಾಗಿದೆ. ಕಳೆದ 24 ಗಂಟೆಯಲ್ಲಿ ರಾಜ್ಯದಲ್ಲಿ ಕೊರೊನಾ ಸೋಂಕಿನಿಂದ ಏಳು ಸೋಂಕಿತರು ಮೃತಪಟ್ಟಿದ್ದು ಸಾವಿನ ಸಂಖ್ಯೆ 12,051ಕ್ಕೆ ಏರಿಕೆಯಾಗಿದೆ. ರಾಜ್ಯದಲ್ಲಿ 964 ಸೋಂಕಿತರು ಗುಣಮುಖರಾಗಿ ಆಸ್ಪತ್ರೆಯಿಂದ ಡಿಸ್ಚಾರ್ಜ್ ಆಗಿದ್ದಾರೆ. ಇದರೊಂದಿಗೆ ಸೋಂಕಿನಿಂದ ಚೇತರಿಸಿಕೊಂಡವರ ಸಂಖ್ಯೆ 8,89,881ಕ್ಕೆ ಏರಿಕೆಯಾಗಿದೆ. ಇನ್ನು 13,394 ಸಕ್ರಿಯ ಪ್ರಕರಣಗಳಿದ್ದು ಈ ಪೈಕಿ 205 ಮಂದಿ ಕೋವಿಡ್ ಆಸ್ಪತ್ರೆಯ ಐಸಿಯುನಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆಂದು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಪ್ರಕಟಣೆಯಲ್ಲಿ ತಿಳಿಸಿದೆ.



ಸಂಯುಕ್ತ ಕರ್ನಾಟಕ

# ವರ್ಷಾಚರಣೆಗೆ ಹೊಸ ಮಾರ್ಗಸೂಚಿ

**ಸಂ.ಕ.ಸಮಾಚಾರ ಬೆಂಗಳೂರು**

ಹೊಸ ವರ್ಷಾಚರಣೆ ಹಿನ್ನೆಲೆಯಲ್ಲಿ ಪ್ರತ್ಯೇಕ ಮಾರ್ಗಸೂಚಿ ಹೊರಡಿಸಲು ಸರ್ಕಾರ ನಿರ್ಧರಿಸಿದ್ದು ಇದು ಡಿ.30 ಹಾಗೂ 31ಕ್ಕೆ ಅನ್ವಯವಾಗಲಿದೆ.

ಈ ಕುರಿತು ಬೆಂಗಳೂರು ನಗರ ಪೊಲೀಸ್ ಆಯುಕ್ತ ಕಮಲ್‌ಪಂತ್ ಮಾಧ್ಯಮಗಳಿಗೆ ವಿವರಿಸಿ, ಕೊರೊನಾ ನಿಯಮಾವಳಿ ಪ್ರಕಾರ ಹೊಸ ವರ್ಷಕ್ಕೆ ಗೃಹ ಸಚಿವರು ಮಾರ್ಗಸೂಚಿಯನ್ನು ಹೊರಡಿಸುವಂತೆ ಹೇಳಿದ್ದಾರೆ. ಈ ಹಿನ್ನೆಲೆಯಲ್ಲಿ ಬಿಬಿಎಂಪಿ ಅಧಿಕಾರಿಗಳ ಜೊತೆ ಸಭೆ ಮಾಡಲಾಗಿದೆ. ಇನ್ನು ಎರಡು ದಿನದಲ್ಲಿ ಹೊಸ ಮಾರ್ಗಸೂಚಿಯನ್ನು ಹೊರಡಿಸಲಾಗುತ್ತದೆ.

ಡಿ.30 ಮತ್ತು 31ರಂದು ಆಚರಣೆಗೆ ಅವಕಾಶ ಮಾಡಿಕೊಡದೇ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಲಾಗುವುದು. ನಮ್ಮ ಅಧಿಕಾರಿಗಳ ಜೊತೆ ಸಭೆ ಮಾಡುತ್ತೇನೆ. ಅವರ ಜೊತೆ ಚರ್ಚೆ ನಡೆಸಿ ಏನೆಲ್ಲಾ ಕ್ರಮಗಳು ಜರುಗಿಸಬಹುದು. ವಿನಾಯಿತಿ ಏನು ನೀಡಬೇಕು ಎಂಬುದರ ಬಗ್ಗೆ ಚರ್ಚಿಸಿ ನಂತರ ಪ್ರಕಟಿಸಲಾಗುವುದು ಎಂದರು.

ಹೊಸ ವರ್ಷದ ಸಂದರ್ಭದಲ್ಲಿ ಎಂಜಿ ರಸ್ತೆ, ಬ್ರಿಗೇಡ್ ರಸ್ತೆ, ಚರ್ಚ್ ಸ್ಟ್ರೀಟ್‌ಗಳಲ್ಲಿ ಜನಸೇರುವಂತಿಲ್ಲ. ಇಲ್ಲಿನ ಹೋಟೆಲ್, ಬಾರ್, ರೆಸ್ಟೋರೆಂಟ್‌ಗಳೂ ಕೂಡಾ ಕೋವಿಡ್ ನಿಯಮಾವಳಿ ಪ್ರಕಾರವೇ ಕಾರ್ಯ ನಿರ್ವಹಿಸಬೇಕು. ಒಟ್ಟಿನಲ್ಲಿ ಈ ಮಾರ್ಗಸೂಚಿ ಕಟ್ಟುನಿಟ್ಟಿನಿಂದ ಕೂಡಿರುತ್ತದೆ ಎಂದು ಮಾಹಿತಿ ನೀಡಿದರು. ಪ್ರಮುಖವಾದ ರಸ್ತೆಗಳು ಮಾತ್ರವಲ್ಲದೆ, ಇಂದಿರಾನಗರ, ಕೋರಮಂಗಲ ಸೇರಿದಂತೆ ಬೆಂಗಳೂರಿನ ಯಾವುದೇ ಪ್ರದೇಶದಲ್ಲೂ ಹೊಸ ವರ್ಷಾಚರಣೆಗೆ ಜನಜಂಗುಳಿ ಸೇರುವಂತಿಲ್ಲ ಎಂದು ಹೇಳಿದರು.

ಸಂಯುಕ್ತ ಕರ್ನಾಟಕ Sun, 27 December 2020
epaper.samyukthakarnataka.com/c/573087

ಸಂಯುಕ್ತ ಕರ್ನಾಟಕ

# ಬ್ರಿಟನ್‌ನಿಂದ ಬಂದವರ ಅವಾಂತರ

## ಸೋಂಕಿತರ ಸಂಖ್ಯೆ 14ಕ್ಕೆ ಏರಿಕೆ | 587 ಮಂದಿಗೆ ಪರೀಕ್ಷೆ ಬಾಕಿ | 220 ಮಂದಿ ನಾಪತ್ತೆ: ಆತಂಕ

**ಸಂ.ಕ.ಸಮಾಚಾರ ಬೆಂಗಳೂರು**

ರೂಪಾಂತರಿ ಕೊರೊನಾ ವೈರಸ್ ಪತ್ತೆಯಾಗಿರುವ ಬ್ರಿಟನ್‌ನಿಂದ ರಾಜಧಾನಿಗೆ ಹಿಂದಿರುಗಿರುವ ಪೈಕಿ ಹೊಸದಾಗಿ ಶನಿವಾರ ಮೂವರಲ್ಲಿ ಸೋಂಕು ದೃಢಪಟ್ಟಿದೆ. ಈ ಮೂಲಕ ಸೋಂಕಿತರ ಸಂಖ್ಯೆ 14ಕ್ಕೆ ಏರಿಕೆಯಾಗಿದೆ. ಇದರ ನಡುವೆ ಬ್ರಿಟನ್‌ನಿಂದ ಬಂದು ನಾಪತ್ತೆಯಾದವರ ಸಂಖ್ಯೆ 220ಕ್ಕೆ ಹೆಚ್ಚಾಗಿದೆ.

> “ಬ್ರಿಟನ್‌ನಿಂದ ಬೆಂಗಳೂರಿಗೆ ಬಂದು ನಾಪತ್ತೆಯಾದವರ ಸಂಖ್ಯೆ 220ಕ್ಕೆ ಏರಿಕೆಯಾಗಿದೆ. ಕಳೆದ ಶುಕ್ರವಾರ 151 ಇದ್ದ ನಾಪತ್ತೆ ಪ್ರಕರಣಗಳ ಸಂಖ್ಯೆ ಶನಿವಾರಕ್ಕೆ 220ಕ್ಕೆ ಏರಿಕೆಯಾಗಿದೆ. ಬಿಬಿಎಂಪಿ ಅಧಿಕಾರಿಗಳು ನಾಪತ್ತೆಯಾದವರನ್ನು ಹುಡುಕಾಟದಲ್ಲಿ ತೊಡಗಿದ್ದಾರೆ. ನಾಪತ್ತೆಯಾದವರು ಮೊಬೈಲ್ ಆಫ್ ಮಾಡಿಕೊಂಡಿದ್ದಾರೆ ಹಾಗೂ ನೀಡಿದ ವಿಳಾಸದಲ್ಲಿ ವಾಸವಿಲ್ಲ. ಒಂದು ವೇಳೆ ಉದ್ದೇಶಪೂರ್ವಕವಾಗಿ ಯಾವುದೇ ಪ್ರಯಾಣಿಕರು ತಪ್ಪಿಸಿಕೊಂಡಿರುವುದು ಕಂಡುಬಂದರೆ ಅವರ ವಿರುದ್ಧ ದೂರು ದಾಖಲಿಸಲಾಗುವುದು.
>
> ■ ಪಾಲಿಕೆ ಅಧಿಕಾರಿಗಳು

ಡಿ.1ರಿಂದ 21ರವರೆಗೆ ಬ್ರಿಟನ್‌ನಿಂದ ಒಟ್ಟು 1,768 ಮಂದಿ ಬೆಂಗಳೂರಿಗೆ ವಾಪಸ್ಸಾಗಿದ್ದಾರೆ. ಈ ಪೈಕಿ 1,489 ಮಂದಿಯನ್ನು ಪತ್ತೆ ಹಚ್ಚಿರುವ ಬಿಬಿಎಂಪಿ, 902 ಮಂದಿಯನ್ನು ಕೊರೊನಾ ಪರೀಕ್ಷೆಗೆ ಒಳಪಡಿಸಿದೆ. ಶನಿವಾರ ಮೂವರಲ್ಲಿ ಹೊಸದಾಗಿ ಸೋಂಕು ಪತ್ತೆಯಾಗಿದ್ದು ಒಟ್ಟು ಸೋಂಕಿತರ ಸಂಖ್ಯೆ 14 ಏರಿಕೆಯಾಗಿದೆ. ಉಳಿದ 587 ಮಂದಿಯನ್ನು ಪರೀಕ್ಷೆ ಬಾಕಿ ಇದೆ.

ಈವರೆಗೆ ಕೋವಿಡ್ ಪರೀಕ್ಷೆಗೆ ಒಳಗಾದ 1,489 ಮಂದಿಯ ಪೈಕಿ 590 ಮಂದಿಯ ಪರೀಕ್ಷಾ ವರದಿ ಲಭ್ಯವಾಗಿದ್ದು, 14 ಮಂದಿಗೆ ಸೋಂಕು ಪತ್ತೆಯಾಗಿದೆ. 576 ಕೊರೊನಾ ಪರೀಕ್ಷಾ ವರದಿ ನೆಗೆಟಿವ್ ಬಂದಿದೆ. ಇನ್ನೂ 314 ಮಂದಿಯ ಫಲಿತಾಂಶ ಬಾಕಿ ಇದೆ ಎಂದು ಬಿಬಿಎಂಪಿ ಅಧಿಕಾರಿಗಳು ಮಾಹಿತಿ ನೀಡಿದ್ದಾರೆ.

ಇದುವರೆಗೆ ಪತ್ತೆಯಾಗಿರುವ 14 ಕೋವಿಡ್ ಸೋಂಕು ಪ್ರಕರಣಗಳಲ್ಲಿ ಮಹದೇವಪುರ ವಲಯದಲ್ಲಿ 5, ಪಶ್ಚಿಮ 4, ಬೊಮ್ಮನಹಳ್ಳಿ 3, ದಕ್ಷಿಣ ಹಾಗೂ ಪೂರ್ವ ವಲಯದಲ್ಲಿ ತಲಾ 1 ಪ್ರಕರಣ ಪತ್ತೆಯಾಗಿದೆ. ಬೆಂಗಳೂರಿನ ವಿಳಾಸ ನೀಡಿದ 20 ಮಂದಿ ಬೆಂಗಳೂರಿನಿಂದ ಹೊರ ಜಿಲ್ಲೆ ಹಾಗೂ ರಾಜ್ಯಗಳಿಗೆ ತೆರಳಿದ್ದಾರೆ. ಈ ಬಗ್ಗೆ ಸಂಬಂಧಸಿದ ಅಧಿಕಾರಿಗಳಿಗೆ ಮಾಹಿತಿ ನೀಡಲಾಗಿದೆ. 31 ಮಂದಿಯ ಹೆಸರು ಪುನರಾವರ್ತನೆಯಾಗಿದೆ. ಆರು ಮಂದಿ ಬ್ರಿಟನ್‌ನಿಂದ ಬೆಂಗಳೂರಿಗೆ ಆಗಮಿಸಿಲ್ಲ ಎಂದು ಬಿಬಿಎಂಪಿ ಅಧಿಕಾರಿಗಳು ಮಾಹಿತಿ ನೀಡಿದ್ದಾರೆ.

ಸಂಯುಕ್ತ ಕರ್ನಾಟಕ

# ಬ್ರಿಟನ್‌ನಿಂದ ಬಂದವರಿಗೆ ಹುಡುಕಾಟ

ಸಂ.ಕ.ಸಮಾಚಾರ ಬೆಂಗಳೂರು

ಬ್ರಿಟನ್ ಮಾತ್ರವಲ್ಲದೆ ಮತ್ತೆ ಐದಾರು ದೇಶಗಳಲ್ಲಿ ವಕ್ಕರಿಸಿರುವ ಮಾರಣಾಂತಿಕ ರೂಪಾಂತರಿ ಕೊರೊನಾ ಎಲ್ಲೆಡೆ ದಿಗಿಲು ಹುಟ್ಟಿಸಿದೆ. ಕಳೆದೊಂದು ತಿಂಗಳಲ್ಲಿ ಭಾರತಕ್ಕೆ 38 ಸಾವಿರಕ್ಕೂ ಅಧಿಕ ಮಂದಿ ಬ್ರಿಟನ್‌ನಿಂದ ಬಂದಿದ್ದು ವರದಿ ಕಲೆಹಾಕುವ ಗಂಭೀರ ಪ್ರಯತ್ನ ನಡೆದಿದೆ. ಭಾನುವಾರ ಕೇಂದ್ರ ಕೆಲವು ಮಹತ್ವದ ಮಾಹಿತಿ ಬಹಿರಂಗಗೊಳಿಸುವ ಸಾಧ್ಯತೆ ಇದೆ.

ಬ್ರಿಟನ್‌ನಿಂದ ಕರ್ನಾಟಕಕ್ಕೆ ಬಂದ 2,500 ಜನ ಪೈಕಿ, 1,638 ಜನರಿಗೆ ಕೊರೊನಾ ಪರೀಕ್ಷೆ ನಡೆಸಲಾಗಿದೆ. ಈ ಪೈಕಿ 14 ಜನರಿಗೆ ಸೋಂಕು ಧೃಡಪಟ್ಟಿದೆ. ಇವರ ಮಾದರಿ ನಿಮ್ಹಾನ್ಸ್‌ನ ಲ್ಯಾಬ್‌ಗೆ ತಲುಪಿದೆ. ಈ ಮಾದರಿಗಳನ್ನು ಜೆನೆಟಿಕ್ ಸೀಕ್ವೆನ್ಸಿಂಗ್ ಮಾಡಲಾಗುತ್ತಿದೆ. ಇದಕ್ಕೆ 48 ಗಂಟೆಗಳ ಕಾಲ ಬೇಕಾಗುತ್ತದೆ. ಆದರೆ ಬೆಂಗಳೂರಿನಗೆ ಬಂದಿರುವ 151 ಪ್ರಯಾಣಿಕರ ಪತ್ತೆ ಸಾಧ್ಯವಾಗಿಲ್ಲ. ಸಂಗ್ರಹಿತ ಅಧಿಕೃತ ದಾಖಲೆ ಆಧಾರದಲ್ಲಿ ಶೋಧ ನಡೆದರೂ ಅವರ ಪತ್ತೆಯಾಗಿಲ್ಲ. ಕೆಲವರು ಹೊರ ರಾಜ್ಯಕ್ಕೆ ತೆರಳಿರುವ ಮಾಹಿತಿ ಸಿಕ್ಕಿದ್ದರೆ, ಇನ್ನೂ ಕೆಲವರು ಎಲ್ಲಿದ್ದಾರೆಂಬ ಸಣ್ಣ ಸುಳಿವೂ ಬಿಬಿಎಂಪಿ ಶೋಧನಾ ತಂಡಕ್ಕೆ ಲಭ್ಯವಾಗುತ್ತಿಲ್ಲ.

ಈ 151 ಮಂದಿ ರಾಜ್ಯಕ್ಕೆ ಬಂದ ಬಳಿಕ ಎಷ್ಟು ಜನರೊಂದಿಗೆ ಪ್ರಾಥಮಿಕ ಅಥವಾ ದ್ವಿತೀಯ ಸಂಪರ್ಕ ಹೊಂದಿದ್ದಾರೆಂಬುದು ತೀವ್ರ ಆತಂಕಕ್ಕೆ ಕಾರಣವಾಗಿದೆ. ಇವರು ಕೋವಿಡ್ ತಪಾಸಣೆ ಮಾಡಿಸಿಕೊಂಡಿರುವ ದಾಖಲೆಗಳೂ ಇಲ್ಲ. ಒಂದು ವೇಳೆ ಪಾಸಿಟಿವ್ ಇದ್ದಿದ್ದೇ ಆದಲ್ಲಿ ಸಂಪರ್ಕಿತರ ಗತಿಯೇನು? ಎಂದು ಆರೋಗ್ಯ ಇಲಾಖೆ ತಲೆಕೆಡಿಸಿಕೊಂಡಿದೆ. ಈ ಹಿಂದೆ ಮೊದಲ ಹಂತದಲ್ಲಿ ತಬ್ಲಿಘಿಗಳ ಬಗ್ಗೆ ತೋರಿದ್ದ ನಿರ್ಲಕ್ಷ್ಯದಂತಾದಲ್ಲಿ ರೂಪಾಂತರಿ ವೈರಾಣುವಿನಿಂದ ಭಾರೀ ಅಪಾಯ ಕಟ್ಟಿಟ್ಟ ಬುತ್ತಿಯಾಗಲಿದೆ. ಇಡೀ ದೇಶದಲ್ಲಿ ಬ್ರಿಟನ್‌ನಿಂದ ಒಟ್ಟು 38,500 ಜನರು ಬಂದಿದ್ದಾರೆ. ಎಲ್ಲ ರಾಜ್ಯಗಳಿಂದ ಬಂದ ಮಾದರಿ, ವರದಿಯನ್ನು ಕಲೆಹಾಕಿ ಅಂತಿಮ ವರದಿಯನ್ನು ಐಸಿಎಂಆರ್ ಪ್ರಕಟಿಸಲಿದೆ. ಯಾವುದೇ ರಾಜ್ಯಗಳು ಈ ಬಗ್ಗೆ ಮಾಹಿತಿ ನೀಡುವಂತಿಲ್ಲ ಎಂದಿರುವುದು ರೂಪಾಂತರಿ ವೈರಾಣು ಸೋಂಕಿನ ಬಗ್ಗೆ ಶಂಕೆ ಮೂಡುವಂತೆ ಮಾಡಿದೆ. ಈ ನಡುವೆ ಬ್ರಿಟನ್, ದಕ್ಷಿಣ ಆಫ್ರಿಕಾದಲ್ಲಿ ಪತ್ತೆಯಾಗಿದ್ದ ರೂಪಾಂತರಿ ವೈರಾಣು ನೆದರ್‌ಲೆಂಡ್, ಆಸ್ಟ್ರೇಲಿಯಾ, ಜಪಾನ್‌ಗೂ ವಕ್ಕರಿಸಿದೆ. ವಿಶೇಷವೆಂದರೆ ತೀವ್ರ ಜನಸಂದಣಿಯ ನೈಜೀರಿಯಾದಲ್ಲಿ ರೂಪಾಂತರಿ ವೈರಾಣು ಮಾರಣಾಂತಿಕ ತೀವ್ರತೆಯದ್ದು ಎನ್ನಲಾಗಿದೆ. ವಿಶ್ವಸಂಸ್ಥೆ ಸೋಂಕಿತ ರಾಷ್ಟ್ರಗಳಿಗೆ ಕಟ್ಟೆಚ್ಚರಕ್ಕೆ ಸೂಚನೆ ರವಾನಿಸಿದೆ.



“ಹೊಸ ಪ್ರಭೇದದ ಕೋವಿಡ್ ನಿಯಂತ್ರಣಕ್ಕೆ ಹೊಸ ವರ್ಷಕ್ಕೆ ಹೊಸ ಮಾರ್ಗಸೂಚಿ ರೂಪಿಸಬೇಕಿದೆ. ಇದಕ್ಕಾಗಿ ಗೃಹ ಇಲಾಖೆಯ ಜೊತೆ ಸಭೆ ನಡೆಸಿ ನೂತನ ಮಾರ್ಗಸೂಚಿ ರೂಪಿಸಲಾಗುವುದು. ಎಲ್ಲ ಮಾಹಿತಿಯನ್ನೂ ಕೇಂದ್ರಕ್ಕೆ ರವಾನಿಸಲಾಗುತ್ತಿದೆ. ಅಲ್ಲಿಂದಲೇ ಅಧಿಕೃತ ಘೋಷಣೆಯಾಗಲಿದೆ.

■ **ಡಾ. ಕೆ. ಸುಧಾಕರ್** | ಆರೋಗ್ಯ ಸಚಿವ

- **ಸಂಪರ್ಕಿತರ ಸಂಖ್ಯೆ ಬಗ್ಗೆ ಆತಂಕ**
- **ರೂಪಾಂತರಿ ಕೊರೊನಾ ಸೋಂಕಿನ ಶಂಕೆ**
- **ಕೇಂದ್ರ ಸರ್ಕಾರದಿಂದ ಇಂದು ಪರೀಕ್ಷಾ ವರದಿ ಘೋಷಣೆ**

## ಸೋಂಕಿನ ಸ್ವರೂಪ ಇಂದು ಬಯಲು

ಬ್ರಿಟನ್‌ನಿಂದ ಆಗಮಿಸಿರುವ 14 ಮಂದಿ ಪ್ರವಾಸಿಗರಿಗೆ ಸೋಂಕು ಕಾಣಿಸಿಕೊಂಡಿರುವುದರಿಂದ ಸರ್ಕಾರಕ್ಕೆ ದೊಡ್ಡ ತಲೆನೋವಾಗಿ ಪರಿಣಮಿಸಿದೆ. ಈ 14 ಮಂದಿಯಲ್ಲಿ ಎಷ್ಟು ಜನಕ್ಕೆ ರೂಪಾಂತರದ ಸೋಂಕು ತಗುಲಿದೆ ಎಂಬುದು ಭಾನುವಾರ ಸಂಜೆಯ ವೇಳೆಗೆ ಗೊತ್ತಾಗಲಿದೆ. ಬ್ರಿಟನ್ ಸೇರಿದಂತೆ ಇನ್ನಿತರ ರಾಷ್ಟ್ರಗಳಿಂದ 1638 ಮಂದಿ ಕರ್ನಾಟಕಕ್ಕೆ ಆಗಮಿಸಿದ್ದು, ಇವರಲ್ಲಿ 14 ಮಂದಿಗೆ ಪಾಸಿಟಿವ್ ಬಂದಿದೆ. ಇವರ ಗಂಟಲು ದ್ರವವನ್ನು ಸಂಗ್ರಹಿಸಿ ನಿಮ್ಹಾನ್ಸ್ ಮೂಲಕ ಪುಣೆಯ ಲ್ಯಾಬ್‌ಗೆ ಕಳುಹಿಸಲಾಗಿದೆ. ಅಲ್ಲಿಂದ ಭಾನುವಾರ ಸಂಜೆ ವೇಳೆಗೆ ವರದಿ ಲಭ್ಯವಾಗಲಿದ್ದು, ಇದರಲ್ಲಿ ರೂಪಾಂತರದ ಸೋಂಕು ಕಾಣಿಸಿಕೊಂಡಲ್ಲಿ ಸಮಸ್ಯೆ ಸೃಷ್ಟಿಯಾಗಲಿದೆ. ಇದಕ್ಕೆ ಏನು ಮಾಡಬೇಕು ಎಂಬುದು ಸರ್ಕಾರದ ಮುಂದೆ ಕಾಡಲಿರುವ ಪ್ರಶ್ನೆಯಾಗಲಿದೆ. ಹೊಸ ಸೋಂಕಿಗೆ ಯಾವ ಕ್ರಮ ತೆಗೆದುಕೊಳ್ಳಬೇಕಾಗುತ್ತದೆ ಎಂಬ ದೊಡ್ಡ ತಲೆನೋವು ಸರ್ಕಾರವನ್ನು ಕಾಡದೇ ಇರದು.

ಹೊಸ ದಿಗಂತ

ಹೊಸ ದಿಗಂತ



27 Dec 2020

## ಬಿಬಿಎಂಪಿ ಆಡಳಿತಾಧಿಕಾರಿ ಗೌರವ್ ಗುಪ್ತಾ ಹೇಳಿಕೆ

# ತ್ಯಾಜ್ಯ ವಿಲೇವಾರಿ: ಬದಲಾವಣೆಗೆ ಕ್ರಮ



**ಬೆಂಗಳೂರು:** ಪಾಲಿಕೆ ವ್ಯಾಪ್ತಿಯಲ್ಲಿ ಘನತ್ಯಾಜ್ಯ ವಿಲೇವಾರಿ ಪದ್ಧತಿಯಲ್ಲಿ ಸಾಕಷ್ಟು ಬದಲಾವಣೆ ತರುವ ನಿಟ್ಟಿನಲ್ಲಿ ಕ್ರಮ ವಹಿಸಲಾಗುವುದು ಎಂದು ಬಿಬಿಎಂಪಿ ಆಡಳಿತಾಧಿಕಾರಿ ಗೌರವ್ ಗುಪ್ತಾ ತಿಳಿಸಿದರು.

ಶನಿವಾರ ಬಿಬಿಎಂಪಿ ಕೇಂದ್ರ ಕಚೇರಿಯಲ್ಲಿ ಬೆಂಗಳೂರು ಮಿಷನ್-2022ಗೆ ಸಂಬಂಧಿಸಿದಂತೆ ಸ್ವಚ್ಛ ಬೆಂಗಳೂರು ಅಂಶದಡಿ ಕೈಗೊಂಡಿರುವ ಕಾರ್ಯಗಳ ಕುರಿತು ವೀಡಿಯೋ ಕಾನ್ಫರೆನ್ಸ್ ನಲ್ಲಿ ಸಭೆ ನಡೆಸಿ ಮಾತನಾಡಿದ ಅವರು, ಪಾಲಿಕೆಯ ಸಿಬ್ಬಂದಿ, ಅಧಿಕಾರಿಗಳ ಜೊತೆ ಸಾರ್ವಜನಿಕರು, ಸ್ಥಳೀಯ ನಾಗರಿಕ ಸಂಸ್ಥೆಗಳು, ನಿವಾಸಿ ಸಂಘಗಳು ಸೇರಿಕೊಂಡು ಕೆಲಸ ಮಾಡಿದರೆ ತ್ವರಿತಗತಿಯಲ್ಲಿ ಬದಲಾವಣೆ ಮಾಡಲು ಹಾಗೂ ನಗರವನ್ನು ಸ್ವಚ್ಛವಾಗಿಡಲು ಸಾಧ್ಯವಾಗುತ್ತದೆ ಎಂದರು.

**ಕಸ ಸಂಸ್ಕರಣೆ ಕುರಿತು ನಾಗರಿಕರಲ್ಲಿ ಅರಿವು:** ನಗರದಲ್ಲಿ ಪಾಲಿಕೆ ವತಿಯಿಂದ ಕಸ ಸಂಗ್ರಹ, ವಿಲೇವಾರಿ ಮತ್ತು ಸಂಸ್ಕರಣೆ ಜೊತೆಗೆ ನಾಗರಿಕರಲ್ಲಿ ಅರಿವು ಮೂಡಿಸಲಾಗುತ್ತಿದೆ. ಈ ನಿಟ್ಟಿನಲ್ಲಿ ಪಾಲಿಕೆ ವ್ಯಾಪ್ತಿಯ 198 ವಾರ್ಡ್‌ಗಳಲ್ಲಿ 750ರಿಂದ 1000 ಮನೆಗೊಂದರಂತೆ 4,200 ಬ್ಲಾಕ್ ಗಳನ್ನು ರಚಿಸಲಾಗಿದೆ. ಈ ಪೈಕಿ ಬ್ಲಾಕ್ ಮಟ್ಟದಲ್ಲಿ ಶುಚಿಮಿತ್ರವನ್ನು ಗುರುತಿಸುವುದು, ಲಿಂಕ್ ವರ್ಕರ್ಸ್‌ಗಳ ಮೂಲಕ ಹೆಚ್ಚು ಜಾಗೃತಿ ಮೂಡಿಸುವುದು. ಪ್ರತಿ ವಾರ್ಡ್ ಮಟ್ಟದಲ್ಲಿ ಮಾರ್ಷಲ್, ಕಿರಿಯ ಆರೋಗ್ಯ ಪರಿವೀಕ್ಷಕ ಹಾಗೂ ವಾರ್ಡ್‌ಗೊಬ್ಬ ಸ್ವಯಂಸೇವಕರ ಮೂಲಕ ಅರಿವು ಮೂಡಿಸುವುದು, ಅದಲ್ಲದೆ ವಲಯಕೊಬ್ಬ ಸ್ವಯಂಸೇವಕರನ್ನು ಗುರುತಿಸಲಾಗುವುದು. ಇವರುಗಳಿಗೆ ಸೂಕ್ತ ತರಬೇತಿ ನೀಡಲು ವಿಧಾನಸಭಾ ಕ್ಷೇತ್ರಕ್ಕೊಬ್ಬ ಮಾಸ್ಟರ್ ಟ್ರೈನರ್ ಗುರುತಿಸಿ ಸಾರ್ವಜನಿಕರಿಗೆ ಜಾಗೃತಿ ಮೂಡಿಸಲು ನಿರ್ಧರಿಸಲಾಗಿದೆ ಎಂದು ಗೌರವ್ ಗುಪ್ತಾ ವಿವರಿಸಿದರು.

ಹೊಸ ದಿಗಂತ

# ವರ್ಷಾಚರಣೆ: ಶೀಘ್ರ ಮಾರ್ಗಸೂಚಿ ಪ್ರಕಟ

**ಬೆಂಗಳೂರು:** ಹೊಸ ವರ್ಷಾಚರಣೆ ಹಿನ್ನೆಲೆಯಲ್ಲಿ ಅಧಿಕಾರಿಗಳೊಂದಿಗೆ ಸಭೆ ನಡೆಸಿ ಶೀಘ್ರದಲ್ಲೇ ಮಾರ್ಗಸೂಚಿ ಬಿಡುಗಡೆ ಮಾಡಲಾಗುವುದು ಎಂದು ನಗರ ಪೊಲೀಸ್ ಆಯುಕ್ತ ಕಮಲ್ ಪಂತ್ ಸ್ಪಷ್ಟಪಡಿಸಿದರು.

ತಿಲಕ್‌ನಗರ ಪೊಲೀಸ್ ಠಾಣೆಯಲ್ಲಿ ಸುದ್ದಿಗಾರರೊಂದಿಗೆ ಶನಿವಾರ ಮಾತನಾಡಿದ ಅವರು, ಹೊಸ ವರ್ಷಾಚರಣೆ ಸಂಬಂಧ ಪ್ರತ್ಯೇಕ ಮಾರ್ಗಸೂಚಿ ಹೊರಡಿಸಲಾಗುತ್ತಿದೆ. ಇದಕ್ಕಾಗಿ ಸಿದ್ಧತೆ ನಡೆದಿದ್ದು, ಕೋವಿಡ್-19 ನಿಯಮಾವಳಿಯಂತೆ ನೂತನ ವರ್ಷಕ್ಕೂ ಗೃಹ ಸಚಿವರು ಮಾರ್ಗಸೂಚಿ ಹೊರಡಿಸಲು ಸೂಚಿಸಿದ್ದಾರೆ. ನಗರದ ಎಂ.ಜಿ.ರಸ್ತೆ, ಬ್ರಿಗೇಡ್ ರಸ್ತೆ, ಇಂದಿರಾನಗರ, ಕೋರಮಂಗಲ ಸೇರಿದಂತೆ ನಾನಾ ಸಾರ್ವಜನಿಕ ಪ್ರದೇಶಗಳಲ್ಲಿ ಸುಖಾಸುಮ್ಮನೆ ಗುಂಪುಗೂಡಿದರೆ ಅಂತಹವರ ವಿರುದ್ಧ ಕಠಿಣ ಕ್ರಮ ಜರುಗಿಸಲಾಗುವುದು ಎಂದು ಎಚ್ಚರಿಸಿದರು.

ಜನದನಿಯ ಸಾರಥಿ
ವಾರ್ತಾ ಭಾರತಿ

ಜನದನಿಯ ಸಾರಥಿ
ವಾರ್ತಾ ಭಾರತಿ

# ರಾಜ್ಯದಲ್ಲಿ 857 ಕೊರೋನ ಪತ್ತೆ: 7 ಸಾವು

ಬೆಂಗಳೂರು, ಡಿ.26: ರಾಜ್ಯದಲ್ಲಿ ಕೊರೋನ ಸೋಂಕಿತರ ಸಂಖ್ಯೆ ಗಣನೀಯವಾಗಿ ಇಳಿಕೆಗೊಂಡಿರುವ ಹಿನ್ನೆಲೆಯಲ್ಲಿ ಶನಿವಾರ ಸೋಂಕಿತರ ಸಂಖ್ಯೆ ಮೂರಂಕಿಗೆ ಇಳಿದಿದ್ದು, 857 ಹೊಸ ಪ್ರಕರಣಗಳು ವರದಿಯಾಗಿದ್ದರೆ, ಸೋಂಕಿನಿಂದ ಏಳು ಜನ ಮೃತಪಟ್ಟಿದ್ದಾರೆ.

ಕರ್ನಾಟಕದಲ್ಲಿ ಒಟ್ಟಾರೆ ಸೋಂಕಿತರ ಸಂಖ್ಯೆ 9,15,345 ಕ್ಕೆ ಏರಿಕೆಯಾಗಿದ್ದು, 205 ಜನರು ಐಸಿಯುನಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಇದುವರೆಗೂ ಕೊರೋನ ಸೋಂಕಿನಿಂದ ಮೃತಪಟ್ಟವರ ಸಂಖ್ಯೆ 12,051 ಕ್ಕೆ ಹೆಚ್ಚಳವಾಗಿದೆ. ರಾಜ್ಯದಲ್ಲಿ ಒಟ್ಟಾರೆ 8,89,881 ಜನರು ವಿವಿಧ ಆಸ್ಪತ್ರೆಗಳಿಂದ ಗುಣಮುಖರಾಗಿ ಬಿಡುಗಡೆಯಾಗಿದ್ದಾರೆ. ಅಲ್ಲದೆ, ಇನ್ನೂ 1,3,394 ಸಕ್ರಿಯ ಪ್ರಕರಣಗಳಿದ್ದು, ಇವರೆಲ್ಲರೂ ವಿವಿಧ ಆಸ್ಪತ್ರೆಗಳಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ ಎಂದು ಆರೋಗ್ಯ ಇಲಾಖೆಯು ಮಾಹಿತಿ ನೀಡಿದೆ.

7 ಜನ ಬಲಿ: ಬೆಂಗಳೂರು ನಗರ-4, ಬಳ್ಳಾರಿ, ಬೆಂಗಳೂರು ಗ್ರಾಮಾಂತರ ಹಾಗೂ ಕಲಬುರಗಿಯಲ್ಲಿ ತಲಾ ಒಬ್ಬೊಬ್ಬರು ಮೃತಪಟ್ಟಿದ್ದಾರೆ.

ಸೋಂಕಿತರ ವಿವರ: ಬಾಗಲಕೋಟೆ 2, ಬಳ್ಳಾರಿ, 7, ಬೆಳಗಾವಿ 12, ಬೆಂಗಳೂರು ಗ್ರಾಮಾಂತರ 13, ಬೆಂಗಳೂರು ನಗರ 471, ಬೀದರ್ 7, ಚಾಮರಾಜನಗರ 10, ಚಿಕ್ಕಬಳ್ಳಾಪುರ 25, ಚಿಕ್ಕಮಗಳೂರು 9, ಚಿತ್ರದುರ್ಗ 9, ದಕ್ಷಿಣ ಕನ್ನಡ 34, ದಾವಣಗೆರೆ 14, ಧಾರವಾಡ 6, ಗದಗ 6, ಹಾಸನ 16, ಹಾವೇರಿ 1, ಕಲಬುರಗಿ 14, ಕೊಡಗು 14, ಕೋಲಾರ 8, ಕೊಪ್ಪಳ 5, ಮಂಡ್ಯ 17, ಮೈಸೂರು 62, ರಾಯಚೂರು 2, ರಾಮನಗರ 2, ಶಿವಮೊಗ್ಗ 31, ತುಮಕೂರು 32, ಉಡುಪಿ 3, ಉತ್ತರ ಕನ್ನಡ 13, ವಿಜಯಪುರ 12 ಹೊಸ ಪ್ರಕರಣಗಳು ವರದಿಯಾಗಿವೆ ಎಂದು ಇಲಾಖೆ ಮಾಹಿತಿ ನೀಡಿದೆ.

## ರಾಜಧಾನಿಯಲ್ಲಿ 471 ಸೋಂಕಿತರು ಪತ್ತೆ

ಸಿಲಿಕಾನ್ ಸಿಟಿಯಲ್ಲಿ ನಿರಂತರವಾಗಿ ಸೋಂಕಿತರ ಸಂಖ್ಯೆ ಇಳಿಮುಖವಾಗುತ್ತಿದ್ದು, ಶನಿವಾರ 471 ಹೊಸ ಕೊರೋನ ಸೋಂಕಿನ ಪ್ರಕರಣಗಳು ವರದಿಯಾಗಿವೆ. ಬ್ರಿಟನ್‌ನಲ್ಲಿ ಹೊಸ ಕೊರೋನ ಸೋಂಕು ಕಾಣಿಸಿಕೊಂಡ ಹಿನ್ನೆಲೆಯಲ್ಲಿ ಸರಕಾರ ಸಾಕಷ್ಟು ಮುಂಜಾಗ್ರತಾ ಕ್ರಮಗಳನ್ನು ಕೈಗೊಂಡಿದ್ದು, ತಪಾಸಣೆ ನಡೆಸಲಾಗುತ್ತಿದೆ. ಶನಿವಾರ ಸೋಂಕಿಗೆ ನಾಲ್ವರು ಬಲಿಯಾಗಿದ್ದಾರೆ.

ನಗರದಲ್ಲಿ ಇದುವರೆಗೂ 3,80,657 ಕೊರೋನ ಪ್ರಕರಣಗಳು ವರದಿಯಾಗಿವೆ. ಅದರಲ್ಲಿ 3,72,970 ಜನರು ಆಸ್ಪತ್ರೆಗಳಿಂದ ಬಿಡುಗಡೆಯಾಗಿದ್ದು, 8,795 ಸಕ್ರಿಯ ಪ್ರಕರಣಗಳಿವೆ. ರಾಜಧಾನಿಯಲ್ಲಿ ಇದುವರೆಗೂ 4,291 ಜನರು ಸೋಂಕಿನಿಂದ ಮೃತಪಟ್ಟಿದ್ದಾರೆ. ಇನ್ನೂ, 97 ಜನರು ವಿವಿಧ ಆಸ್ಪತ್ರೆಗಳ ಐಸಿಯುನಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ.

ಜನದನಿಯ ಸಾರಥಿ
ವಾರ್ತಾ ಭಾರತಿ

ವಾರ್ತಾ ಭಾರತಿ

# ನಕಲಿ ಮಾರ್ಷಲ್‌ನಿಂದ ದಂಡ ವಸೂಲಿ

## ಪೊಲೀಸರಿಗೊಪ್ಪಿಸಿದ ಸಾರ್ವಜನಿಕರು

ಬೆಂಗಳೂರು, ಡಿ.26: ಮಾಸ್ಕ್ ಧರಿಸದ, ದೈಹಿಕ ಅಂತರ ಪಾಲಿಸದವರಿಗೆ ದಂಡ ವಿಧಿಸಿ, ಹಣ ವಸೂಲಿ ಮಾಡುತ್ತಿದ್ದ ನಕಲಿ ಮಾರ್ಷಲ್ ಅನ್ನು ಸಾರ್ವಜನಿಕರು ಪೊಲೀಸರಿಗೆ ಒಪ್ಪಿ ಸಿರುವ ಘಟನೆ ಜಯನಗರದಲ್ಲಿ ನಡೆದಿದೆ.

ನಗರದಾದ್ಯಂತ ಬಿಬಿಎಂಪಿ ನಿಯೋಜಿಸಲ್ಪ ಟ್ಟಿರುವ ಮಾರ್ಷಲ್‌ಗಳು ಮಾಸ್ಕ್ ಧರಿಸದೇ ಓಡಾಡುವವರಿಂದ ದಂಡ ವಸೂಲಿ ಮಾಡಲಾಗುತ್ತಿದ್ದಾರೆ. ಇದನ್ನೇ ನೆಪವಾಗಿಸಿಕೊಂಡ ನಕಲಿ ಮಾರ್ಷಲ್ ಕಿರಣ್(19) ಎಂಬಾತ ಜಯನಗರ ಒಂದನೇ ಬ್ಲಾಕ್‌ನಲ್ಲಿ ಸಾರ್ವಜನಿಕರನ್ನು ತಡೆದು ದಂಡ ವಸೂಲಿಗೆ ಮುಂದಾಗಿದ್ದನು. ಈತನ ವರ್ತನೆಯಿಂದ ಅನುಮಾನಗೊಂಡ ಸಾರ್ವಜನಿಕರು ಪೊಲೀಸರಿಗೆ ಮಾಹಿತಿ ನೀಡಿದ್ದರು. ಈ ಸಂಬಂಧ ತಿಲಕ್ ನಗರದ ಪೊಲೀಸರು ಪ್ರಕರಣ ದಾಖಲು ಮಾಡಿಕೊಂಡಿದ್ದಾರೆ.

ಈ ಸಂಬಂಧ ಪ್ರತಿಕ್ರಿಯಿಸಿರುವ ಚೀಫ್ ಮಾರ್ಷಲ್ ರಾಜ್‌ಬೀರ್ ಸಿಂಗ್, ಕಿರಣ್ ಎಂಬ ವ್ಯಕ್ತಿ ತಾನು ಬಿಬಿಎಂಪಿ ಮಾರ್ಷಲ್ ಎಂದು ಹೇಳಿಕೊಂಡು ಹಣ ವಸೂಲಿ ಮಾಡಲು ಮುಂದಾಗಿದ್ದ, ಈತನ ಬಳಿ ವೈರ್ಲೆಸ್ ವಾಕಿಟಾಕಿ ಹಾಗೂ ಬಿಬಿಎಂಪಿ ಎಂದು ಹೆಸರಿರುವ ಫೈಲ್ ಇತ್ತು. ಈ ವ್ಯಕ್ತಿಯನ್ನು ತಿಲಕ್ ನಗರ ಪೊಲೀಸರಿಗೆ ಒಪ್ಪಿ ಸಲಾಗಿದೆ ಎಂದು ಮಾಹಿತಿ ನೀಡಿದ್ದಾರೆ.

ಮಾರ್ಷಲ್ ಸಮವಸ್ತ್ರ ಧರಿಸದೆ ಹಾಗೂ ಐಡಿ ಕಾರ್ಡ್ ಇಲ್ಲದೆ ಇರುವ ಯಾವುದೇ ವ್ಯಕ್ತಿ ದಂಡ ಸಂಗ್ರಹ ಮಾಡುತ್ತಿರುವುದು ಬೆಳಕಿಗೆ ಬಂದರೆ, ಹಣ ನೀಡದೆ ನೇರವಾಗಿ ಸಾರ್ವಜನಿಕರು ಪೊಲೀಸರಿಗೆ ದೂರು ನೀಡಬೇಕು ಎಂದು ಮನವಿ ಮಾಡಿದರು.

Bengaluru Edition
Dec 27, 2020 Page No.2

ಜನದನಿಯ ಸಾರಥಿ
ವಾರ್ತಾ ಭಾರತಿ

ವಾರ್ತಾ ಭಾರತಿ

## ಬಿಬಿಎಂಪಿಗೆ ಸೇರಿಸುವಂತೆ ಗ್ರಾಮಸ್ಥರ ಬೇಡಿಕೆ

# ರಾಜ್ಯ ಸರಕಾರಕ್ಕೆ ಹೈಕೋರ್ಟ್ ನೋಟಿಸ್

**ಬೆಂಗಳೂರು, ಡಿ.26:** ಬಿಬಿಎಂಪಿ ವ್ಯಾಪ್ತಿಗೆ ದೊಡ್ಡತೋಗೂರು ಗ್ರಾಮ ಪಂಚಾಯತ್ ಅನ್ನು ಸೇರಿಸಲು ನಿರ್ದೇಶಿಸುವಂತೆ ಕೋರಿ ಸಲ್ಲಿಸಿರುವ ಅರ್ಜಿ ಸಂಬಂಧ ರಾಜ್ಯ ಸರಕಾರಕ್ಕೆ ಹೈಕೋರ್ಟ್ ನೋಟಿಸ್ ಜಾರಿಗೊಳಿಸಿದೆ.

ಈ ಕುರಿತು ದೊಡ್ಡತೋಗೂರು ಗ್ರಾಪಂ ವ್ಯಾಪ್ತಿಯ ಹೊಮ್ಮದೇವನಹಳ್ಳಿ ನಿವಾಸಿ ಬಿ.ಎ.ಚೈತ್ರ ಅನಿಲ್ ಸೇರಿದಂತೆ ಪ್ರಮುಖರು ಸಲ್ಲಿಸಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿ ಸಂಬಂಧ ವಿಚಾರಣೆ ನಡೆಸಿದ ಮುಖ್ಯ ನ್ಯಾಯಮೂರ್ತಿ ಎ.ಎಸ್.ಓಕ ನೇತೃತ್ವದ ವಿಭಾಗೀಯ ಪೀಠ, ಪ್ರತಿವಾದಿಗಳಾದ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಕಾರ್ಯದರ್ಶಿ, ನಗರಾಭಿವೃದ್ಧಿ ಇಲಾಖೆ ಕಾರ್ಯದರ್ಶಿ, ಪೌರಾಡಳಿತ ಇಲಾಖೆ ನಿರ್ದೇಶಕ, ದೊಡ್ಡತೋಗೂರು ಗ್ರಾಪಂ ಕಾರ್ಯದರ್ಶಿಗೆ ನೋಟಿಸ್ ಜಾರಿ ಮಾಡಿತು. ಈ ಕುರಿತು ಪೀಠವು, ರಾಜ್ಯ ಸರಕಾರಕ್ಕೆ ನೋಟಿಸ್ ಜಾರಿಗೊಳಿಸಿ ವಿಚಾರಣೆಯನ್ನು ಮುಂದಿನ ವಾರ್ಷಿಕ ಸಾಲಿನ ಫೆ.4ಕ್ಕೆ ಮುಂದೂಡಿತು.

Bengaluru Edition
Dec 27, 2020 Page No.5

ಸಮಸ್ತ ಕನ್ನಡಿಗರ ನಂ.1 ಸಂಜೆ ದಿನಪತ್ರಿಕೆ
ಈ ಸಂಜೆ

# ಟೋಲ್‌ಗೇಟ್ ವೃತ್ತಕ್ಕೆ ಬಾಲಗಂಗಾಧರನಾಥ ಶ್ರೀಗಳ ಹೆಸರು

**ಬೆಂಗಳೂರು,ಡಿ.26-** ನಗರದ ಮಾಗಡಿರಸ್ತೆಯಲ್ಲಿರುವ ಟೋಲ್‌ಗೇಟ್ ಬಳಿಯ ವೃತ್ತಕ್ಕೆ ಈಗಾಗಲೇ ನಿಗದಿಯಾಗಿರುವಂತೆ ಆದಿಚುಂಚನಗಿರಿ ಪೀಠದ ಶ್ರೀ ಡಾ.ಬಾಲಗಂಗಾಧರನಾಥ ಶ್ರೀಗಳ ಹೆಸರನ್ನು ನಾಮಕರಣ ಮಾಡಲಾಗುವುದು ಎಂದು ಸಚಿವ ವಿ.ಸೋಮಣ್ಣ ಸ್ಪಷ್ಟಪಡಿಸಿದ್ದಾರೆ.

ಈ ವೃತ್ತಕ್ಕೆ ಶ್ರೀಗಳ ಹೆಸರು ನಾಮಕರಣ ಮಾಡಬೇಕೆಂದು ಲಕ್ಷಾಂತರ ಭಕ್ತರ ಒತ್ತಾಸೆಯಾಗಿತ್ತು. ಅವರು ಬದುಕಿರುವಾಗಲೇ ಒಪ್ಪಿಗೆಯನ್ನು ಪಡೆಯಲಾಗಿತ್ತು. ಸದ್ಯದಲ್ಲೇ ಟೋಲ್‌ಗೇಟ್ ಬಳಿ ಇರುವ ವೃತ್ತಕ್ಕೆ ಆದಿಚುಂಚನಗಿರಿ ಬಾಲಗಂಗಾಧರನಾಥ ಸ್ವಾಮೀಜಿಗಳ ಹೆಸರು ನಾಮಕರಣ ಮಾಡಲಾಗುವುದು ಎಂದು ಹೇಳಿದರು.

ಈ ಸಂಜೆಯೊಂದಿಗೆ ಮಾತನಾಡಿದ ಅವರು, ರಾತ್ರೋರಾತ್ರಿ ಕೆಲವು ಕಿಡಿಗೇಡಿಗಳು ದುರದ್ದೇಶದಿಂದ ಚಿತ್ರನಟ ಡಾ.ವಿಷ್ಣುವರ್ಧನ್ ಪುತ್ಥಳಿಯನ್ನು ವಿರೂಪಗೊಳಿಸುವ ಕೃತ್ಯ ನಡೆಸಿದ್ದಾರೆ. ಇದರಿಂದ ಅವರ ಅಭಿಮಾನಿಗಳ ಮನಸ್ಸಿಗೆ ನೋವಾಗಿದೆ. ನಾನು ಮಧ್ಯಪ್ರವೇಶ ಮಾಡಿ ಪರಿಸ್ಥಿತಿಯನ್ನು ತಿಳಿಗೊಳಿಸಿದ್ದೇನೆ ಎಂದು ತಿಳಿಸಿದರು.

ವೃತ್ತಕ್ಕೆ ಶ್ರೀಗಳ ನಾಮಕರಣ ಮಾಡಲು ಹಲವಾರು ಬಾರಿ ಸಂಘಟನೆಗಳ ಮುಖಂಡರು ಸೇರಿದಂತೆ ಮತ್ತಿತರರ ಜೊತೆ ಮಾತುಕತೆಯನ್ನು ನಡೆಸಲಾಗಿತ್ತು. ಅದಕ್ಕೆ ಪಾಲಿಕೆಯಿಂದ ಆದೇಶವನ್ನೂ ಹೊರಡಿಸಲಾಗಿತ್ತು. ಕೆಲ ತಿಂಗಳ ಹಿಂದೆ ಕೆಲವರು ರಾತ್ರೋರಾತ್ರಿ ವಿಷ್ಣುವರ್ಧನ್ ಪುತ್ಥಳಿಯನ್ನು ತಂದು ಕೂರಿಸಿದರು. ಇದು ಗೊಂದಲಕ್ಕೆ ಕಾರಣವಾಯಿತು ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಶ್ರೀ ಬಾಲಗಂಗಾಧರನಾಥ ಸ್ವಾಮೀಜಿಗಳು ಹಾಗೂ ಡಾ.ವಿಷ್ಣುವರ್ಧನ್ ಕನ್ನಡ ನಾಡು-ನುಡಿ, ಭಾಷೆ, ಸಾಹಿತ್ಯ, ಶಿಕ್ಷಣ, ಆರೋಗ್ಯ, ವೈದ್ಯಕೀಯ ಸೇರಿದಂತೆ ರಾಜ್ಯದ ಬೆಳವಣಿಗೆಯಲ್ಲಿ ಸಾಕಷ್ಟು ಸಮಾಜಸೇವೆ ಸಲ್ಲಿಸಿದ್ದಾರೆ. ಇಬ್ಬರ ಬಗ್ಗೆಯೂ ನಮಗೆ ಅಪಾರವಾದ ಗೌರವವಿದೆ ಎಂದರು.